# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 269 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 16–05–2024 ಗುರುವಾರ | ಪುಟ: 4 | ಬೆಲೆ : ರೂ.2–00
Volume - 01 Issue - 269 | Title- Code: KARKAN 28269 | Chitradurga | Date: 16-05-2024 Thursday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಓದಲು ಬಾರದವರು ಶಿಕ್ಷಣ ಸಚಿವರಾಗಿದ್ದಾರೆ: ವೈ.ಎ.ನಾರಾಯಣಸ್ವಾಮಿ 2

ನಿವೃತ್ತ ವಿಜ್ಞಾನ ಶಿಕ್ಷಕ ಶಿವಕುಮಾರ್ ನಿವಾಸಕ್ಕೆ ಪೂರ್ಣಿಮಾ ಭೇಟಿ: ಸಾಂತ್ವನ 3

ಮಕ್ಕಳಿಗೆ ಜಂತು ನಿವಾರಕ ಮಾತ್ರೆ ನುಂಗಿಸಿ: ಟಿಹೆಚ್ಇಒ 4



ಸುದ್ದಿ, ಜಾಹಿರಾತಿಗೆ 9686622252


# ಮರೆಯಲಾಗದ ಮಾಣಿಕ್ಯ ನಮ್ಮೆಲ್ಲರ ಮದಕರಿನಾಯಕ: ಟಿ.ರಘುಮೂರ್ತಿ

**ಶುಭ ನುಡಿ**

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

## ಫಾಸ್ಟ್ ನ್ಯೂಸ್

### ಸಹಾಯವಾಣಿ ಆರಂಭ

» ಚಿತ್ರದುರ್ಗ

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ಸಂಬಂಧಿಸಿದಂತೆ ಜಿಲ್ಲೆಯ 1,31,776 ರೈತರಿಗೆ ಮೊದಲನೇ ಕಂತಾಗಿ ಗರಿಷ್ಠ ರೂ.2000 ರವರೆಗೆ ಒಟ್ಟು ರೂ.25,61,56,790/–ಗಳ ಪರಿಹಾರವನ್ನು ಈಗಾಗಲೇ ವಿತರಿಸಲಾಗಿದೆ. ಪ್ರಸ್ತುತ ಎಸ್.ಡಿ.ಆರ್.ಎಫ್, ಎನ್.ಡಿ.ಆರ್.ಎಫ್ ಮಾರ್ಗಸೂಚಿ ಪ್ರಕಾರ ಅರ್ಹತೆಯ ಅನುಸಾರ ಅರ್ಹ ರೈತರಿಗೆ ಗರಿಷ್ಠ ರೂ.2000 ರವರೆಗೆ ಪರಿಹಾರ ಮೊತ್ತ ಪಾವತಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಅರ್ಹತೆಯಂತೆ ಇನ್ನುಳಿದ ಬಾಕಿ ಬೆಳೆಹಾನಿ ಪರಿಹಾರ ಮೊತ್ತವನ್ನು ಸರ್ಕಾರದಿಂದ ಡಿಬಿಟಿ ಮೂಲಕ ವಿತರಿಸಲಾಗುತ್ತಿದ್ದು, ಅದರಂತೆ ಜಿಲ್ಲೆಯ 1,17,064 ರೈತರಿಗೆ ಒಟ್ಟು ರೂ.89,31,60,013/–ಗಳನ್ನು ಪಾವತಿಸಲಾಗುತ್ತಿದೆ. ಬೆಳೆ ಪರಿಹಾರ ಪಾವತಿ ಸಂಬಂಧ ಮಾಹಿತಿ ಪಡೆದುಕೊಳ್ಳಲು ರೈತರಿಗೆ ಅನುಕೂಲವಾಗುವಂತೆ ಜಿಲ್ಲಾಧಿಕಾರಿ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ ಹಾಗೂ ಜಿಲ್ಲೆಯ 6 ತಾಲ್ಲೂಕು ಕಚೇರಿಗಳಲ್ಲಿ ಸಹಾಯವಾಣಿ ಆರಂಭಿಸಲಾಗಿದೆ ಪರಿಹಾರ ಹಣ ಪಾವತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಸಹಾಯವಾಣಿ ಸಂಖ್ಯೆ 08194–222538, ಉಪ ವಿಭಾಗಾಧಿಕಾರಿಗಳ ಕಚೇರಿ 08194–200342 ಹಾಗೂ ಚಿತ್ರದುರ್ಗ ತಾಲ್ಲೂಕು ಕಚೇರಿ 08194–222416.

### ಸಾರ್ವಜನಿಕರಿಗೆ ತಲೆನೋವಾಗಿರುವ ನೊಂದಣಿ ಮತ್ತು ಮುದ್ರಾಂಕ ಇಲಾಖೆ ನೂತನ ಆದೇಶ




» ಚಳ್ಳಕೆರೆ

ಕರ್ನಾಟಕರಾಜ್ಯನೊಂದಣೆಮತ್ತುಮುದ್ರಾಂಕ ಇಲಾಖೆ ಇತ್ತೀಚೆಗೆ ಹೊಸ ಆದೇಶವನ್ನು ಹೊರಡಿಸಿ ಪ್ರತಿನಿತ್ಯ ನೊಂದಾವಣೆಗಾಗಿ ಕಚೇರಿಗೆ ಆಗಮಿಸುವವರು ಇಲಾಖೆಯ ಆಫ್‌ನಲ್ಲೇ ತಮ್ಮ ಹೆಸರು ನೊಂದಾಯಿಸಿ ಸಮಯವನ್ನು ನಿಗದಿಪಡಿಸಿಕೊಂಡು ಬರುವಂತೆ ಸೂಚನೆ ನೀಡಲಾಗಿದೆ. ಆದರೆ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನೊಂದಣೆ ಮತ್ತು ಮುದ್ರಾಂಕ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದಿಂದ ಆಗಮಿಸುವ ಸಾರ್ವಜನಿಕರಿಗೆ ಇದರಿಂದ ಹೆಚ್ಚು ತೊಂದರೆಯಾಗುತ್ತದೆ. ಕಾರಣ, ನೂತನ ಆದೇಶದ ಪ್ರಕಾರ ನೊಂದಾವಣೆಯಾದವರು ಕಚೇರಿಗೆ ಬರಲು 30 ನಿಮಿಷಗಳ ಕಾಲ ಮಾತ್ರ ಅವಕಾಶವಿರುತ್ತದೆ. ನಂತರ ಬಂದರೆ ಅವರ ನೊಂದಾವಣಾ ಕಾರ್ಯ ಮಾಡಲು ಸಾಧ್ಯವಿಲ್ಲ. ಬದಲಾಗಿ ಆ ಸಮಯಕ್ಕೆ ಬೇರೆಯವರ ನೊಂದಾವಣೆ ಕಾರ್ಯವಿದ್ದರೆ ಇವರು ಮತ್ತೊಮ್ಮೆ ಆಫ್ ಮೂಲಕವೇ ತಮ್ಮ ಹೆಸರನ್ನು ನೊಂದಾಯಿಸಿ ಅದು ನೀಡಿದ ಸಮಯಕ್ಕೆ ಆಗಮಿಸಬೇಕಿದೆ.



> ಚಿತ್ರದುರ್ಗ ಆಳ್ವಿಕೆ ಮಾಡಿದ ಮದಕರಿ ನಾಯಕ ಅವರು ಮಾಡಿದ ಉತ್ತಮ ಕಾರ್ಯಗಳನ್ನು ನಾವು ಮರೆಯಲು ಸಾಧ್ಯವಿಲ್ಲ, ಅವರು ಹಾಕಿಕೊಟ್ಟಂತಹ ದಾರಿಯಲ್ಲಿ ನಾವು ನಡೆಯಬೇಕಿದೆ, ನಾಯಕ ಸಮಜದ ಜೊತೆಗೆ ಎಲ್ಲಾ ಸಮಾಜದವರು ಮದಕರಿನಾಯಕರಿಗೆ ಗೌರವ ಸಲ್ಲಿಸಿ ನೆನಪು ಮಾಡಿಕೊಳ್ಳಬೇಕು.
>
> » **ಕೆ.ಸಿ.ವೀರೇಂದ್ರ ಪಪ್ಪಿ ಶಾಸಕರು ಚಿತ್ರದುರ್ಗ**

» **ನಮ್ಮಜನ ಸಮಾಚಾರ**

ಚಿತ್ರದುರ್ಗ: ನಾಡು ಕಂಡ ವೀರ ಪರಾಕ್ರಮಿ, ನಾಡದೊರೆ ರಾಜವೀರ ಮದಕರಿ ನಾಯಕ ಉತ್ತಮ ಆಳ್ವಿಕೆ ಮೂಲಕ ನಾಡನ್ನು ರಕ್ಷಿಸಿ ಸರ್ವ ಜನಾಂಗದ ನಾಯಕನಾಗಿ ಹೊರಹೊಮ್ಮಿ ರಾಜ್ಯದ ಅನೇಕ ಭಾಗಗಳಲ್ಲಿ ಅಭಿವೃದ್ಧಿಗೆ ಶ್ರಮಿಸಿದರು ಎಂದು ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಹೇಳಿದರು.

ನಗರದ ಮದಕರಿ ನಾಯಕ ವೃತ್ತದಲ್ಲಿ ರಾಜವೀರ ಮದಕರಿನಾಯಕರ 242 ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮದಕರಿ ನಾಯಕ ಪ್ರತಿಮೆಗೆ ಮತ್ತು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪರ್ಚಾನೆ ಮಾಡಿ ಮಾತನಾಡಿದರು.

ಚಿತ್ರದುರ್ಗ ರಾಜರ ಆಳ್ವಿಕೆಯಲ್ಲಿ ಅತ್ಯಂತ ವೀರ ರಾಜನಾಗಿ ನಾಡನ್ನು ಸಂರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು, ಚಿತ್ರದುರ್ಗ ನಗರದ ಅನೇಕ ನೀರಿನ ಸಂಗ್ರಹಣ ಐತಿಹಾಸಿಕ ಹೊಂಡಗಳ ನಿರ್ಮಾಣ, ಒಳಚರಂಡಿ ವ್ಯವಸ್ಥೆ ಸೇರಿ ಎಲ್ಲಾ ಜನಾಂಗದವರ ಹಿತ ಕಾಯುವ ಕೆಲಸವನ್ನು ಮದಕರಿನಾಯಕ ಅವರು ಮಾಡಿದರು.

ಚಿತ್ರದುರ್ಗದ ನಾಯಕರಲ್ಲಿ ಕಡೆಯ ನಾಯಕನಾದ ಮದಕರಿನಾಯಕ ಚಿತ್ರದುರ್ಗ ಸಿಂಹಾಸನವನ್ನು ಅಲಂಕರಿಸಿದಾಗ 12 ವರ್ಷ ವಯಸ್ಸಾಗಿತ್ತು ಎಂದು ಇತಿಹಾಸ ಹೇಳುತ್ತದೆ.25 ವರ್ಷಗಳ ಆಳ್ವಿಕೆ ನಡೆಸಿದ ಮದಕರಿನಾಯಕ 37 ವಯಸ್ಸಿನಲ್ಲಿ ಬಂಧಿಸಿದಾಗ 2.5 ವರ್ಷಗಳ ಸೆರೆ ವಾಸ ಅನುಭವಿಸಿ ವೀರ ಮರಣ ಹೊಂದಿದ್ದು ಅವರ ಮಾಡಿದ ಉತ್ತಮ ಕಾರ್ಯಗಳನ್ನು ಯುವ ಪೀಳಿಗೆ ಮುಟ್ಟಿಸುವ ಕೆಲಸವನ್ನು ಪುಣ್ಯ ಸ್ಮರಣೆ ಮತ್ತು ಜಯಂತ್ಯೋತ್ಸವ ಮೂಲಕ ತಿಳಿಸಲಾಗುತ್ತದೆ ಎಂದು ತಿಳಿಸಿದರು.

ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಿ.ಕಾಂತರಾಜ್ ಮಾತನಾಡಿ ರಾಜ ವೀರ ಮದಕರಿ ನಾಯಕ 242 ಪುಣ್ಯ ಸ್ಮರಣೆಗೆ ಎಲ್ಲಾ ಸಮಾಜದ ಬಂಧುಗಳು ಭಾಗವಹಿಸಿ ಯಶಸ್ವಿಗೊಳಿಸಿರುವುದು ಸಂತಸ ತಂದಿದೆ ಎಂದರು.

ಮದಕರಿ ನಾಯಕ ಆಳ್ವಿಕೆಯಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸಿ ನಗರದ ಅಭಿವೃದ್ಧಿಗೆ ಪಣ ತೊಟ್ಟಿದ್ದರು ಅವರು ಮಾಡಿದ ಕೆಲಸಗಳನ್ನು ದುರ್ಗದ ಜನರು ಮರೆಯಲು ಸಾಧ್ಯವಿಲ್ಲ, ಅವರು ಕಟ್ಟಿಸಿ ನೀರಿನ ಹೊಂಡಗಳಿಂದ ಜಲ ರಕ್ಷಣೆ ಮಾಡಿದರು. ವರ್ಷಕ್ಕೆ ಎರಡು ಬಾರಿ ಮದಕರಿ ನಾಯಕ ಅವರನ್ನು ನೆನಪು ಮಾಡಿಕೊಳ್ಳುವ ಕೆಲಸ ಮಾಡುತ್ತೇವೆ. ಜಯಂತ್ಯೋತ್ಸವ ಮತ್ತು ಪುಣ್ಯ ಸ್ಮರಣೆ ಮೂಲಕ ಮದಕರಿ ನಾಯಕರ ಸ್ಮರಿಸುತ್ತಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಾಯಕ ಸಮಾಜದ ಹೆಚ್.ಜೆ.ಕೃಷ್ಣಮೂರ್ತಿ, ನಗರಸಭೆ ಸದಸ್ಯ ದೀಪು, ರಾಜ ವಂಶಸ್ಥ ರಾಜವೀರ ಮದಕರಿ ನಾಯಕ, ಗೋವಿಂದ ಕಾರಜೋಳ ಪುತ್ರ ಉಮೇಶ್ ಕಾರಜೋಳ, ಮುಖಂಡರಾದ ತಿಪ್ಪೇಸ್ವಾಮಿ, ಮಾಜಿ ನಗರಸಭೆ ಅಧ್ಯಕ್ಷ ಸಿ.ಟಿ.ಕೃಷ್ಣಮೂರ್ತಿ,ಎಟಿಎಸ್ ತಿಪ್ಪೇಸ್ವಾಮಿ, ಹೆಚ್.ಅಂಜಿನಪ್ಪ, ಗೋಪಾಲಸ್ವಾಮಿ ನಾಯಕ, ಸೂರನಾಯಕ, ಮಹರಾಣಿ ಕಾಲೇಜು ಆಡಳಿತಧಿಕಾರಿ ಸಂದೀಪ್, ಗುರುಸಿದ್ದಪ್ಪ, ಜಾನ್ಹಾವಿ ನಾಗರಾಜ್,ಕಾಟೀಹಳ್ಳಿ ಕರಿಯಪ್ಪ, ಅಹೋಬಲ ಅರುಣ್ ಕುಮಾರ್ ಮತ್ತು ಅನೇಕ ಮುಖಂಡರು, ಸಾರ್ವಜನಿಕರು ಭಾಗವಹಸಿದ್ದರು.







### ಕಣ್ಮನ ಸೆಳೆದ ಮದಕರಿನಾಯಕ ಪ್ರತಿಮೆ ಅಲಂಕಾರ

ಸುಗಂಧರಾಜ, ಮಲ್ಲಿಗೆ, ಗುಲಾಬಿ, ಸೇವಂತಿಗೆ, ಹಸಿರು ಪತ್ರೆಯಿಂದ ಕೂಡಿದ್ದ ಬೃಹಧಾಕಾರವಾದ ಹಾರವನ್ನು ಜೆ.ಸಿ.ಬಿ. ಮೂಲಕ ಮದಕರಿನಾಯಕನ ಪ್ರತಿಮೆಗೆ ಸಮರ್ಪಿಸಲಾಯಿತು.. ಬಣ್ಣ ಬಣ್ಣದ ಹೂವುಗಳಿಂದ ಪ್ರತಿಮೆಯನ್ನು ಡೆಕೋರೇಷನ್ ಮಾಡಲಾಗಿತ್ತು. ನಾಯಕ ಸಮಾಜದವರಷ್ಟೆ ಅಲ್ಲದೆ ಬೇರೆ ಬೇರೆ ಜಾತಿಯವರು ಪುಣ್ಯಸ್ಮರಣೆಯಲ್ಲಿ ಪಾಲ್ಗೊಂಡು ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಶಾಲಾ–ಕಾಲೇಜು ವಿದ್ಯಾರ್ಥಿನಿಯರು ಪ್ರತಿಮೆಯ ಎದುರು ನಿಂತು ಸ್ಟೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಿದ್ದರು.

### ರಾಜರ ಆಳ್ವಿಕೆ ನೆನಪಿಸಿದ ದೀಪೋತ್ಸವ ಉದ್ಘಾಟಿಸಿದ ಎಡಿಸಿ

ಮದಕರಿನಾಯಕ ಪುಣ್ಯ ಸ್ಮರಣೆ ಅಂಗವಾಗಿ ಮದಕರಿ ನಾಯಕ ವೃತ್ತದಲ್ಲಿ ಹಮ್ಮಿಕೊಂಡಿದ್ದ ದೀಪೋತ್ಸವ ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ದೀಪ ಹಚ್ಚುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ, ಉಪ ವಿಭಾಗಧಿಕಾರಿ ಕಾರ್ತಿಕ್, ತಹಶೀಲ್ದಾರ್ ನಾಗವೇಣಿ, ಮಾಜಿ ಶಾಸಕ ಪೂರ್ಣಿಮಾ ಶ್ರೀನಿವಾಸ್, ಡಿ.ಟಿ.ಶ್ರೀನಿವಾಸ್, ನಾಯಕ ಸಮಾಜದ ತಾಲೂಕು ಅಧ್ಯಕ್ಷ ಬಿ.ಕಾಂತರಾಜ್, ಗೋವಿಂದ ಕಾರಜೋಳ ಪುತ್ರ ಉಮೇಶ್ ಕಾರಜೋಳ, ಪಿ. ಸವಿತಾ ರಘು ಇದ್ದರು.

### ಕಾಂತರಾಜ್ ನೇತೃತ್ವದಲ್ಲಿ ಮದಕರಿ ನಾಯಕ ಪುಣ್ಯ ಸ್ಮರಣೆ ಯಶಸ್ವಿ



ರಾಜವೀರ ಮದಕರಿನಾಯಕ 242 ನೇ ಪುಣ್ಯ ಸ್ಮರಣೆಯ ಪುಷ್ಪರ್ಚಾನೆ ಮತ್ತು ದೀಪೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಆದರೆ ಈ ಕಾರ್ಯಕ್ರಮದ ನೇತೃತ್ವ ವಹಿಸಿದ್ದು ನಾಯಕ ಸಮಾಜದ ತಾಲೂಕು ಅಧ್ಯಕ್ಷ ಬಿ.ಕಾಂತರಾಜ್.
ಕಳೆದ ಒಂದು ವಾರಗಳಿಂದ ತನ್ನದೇ ಆದ ತಂಡ ಕಟ್ಟಿಕೊಂಡು ಮದಕರಿ ನಾಯಕ ಪುಣ್ಯ ಸ್ಮರಣೆಯನ್ನು ಈ ಬಾರಿ ವಿಶೇಷವಾಗಿ ಮಾಡಬೇಕು ಎಂಬ ಕನಸಿನೊಂದಿಗೆ ಮದಕರಿನಾಯಕ ಅವರಿಗೆ ವಿಶೇಷ ಅಲಂಕಾರಕ್ಕೆ ವಿಶೇಷ ತಂಡ ರಚಿಸಿ ಆಕರ್ಷಣೀಯಾಗಿ ಮಾಡಿಸಿದ್ದರು. ಇದರ ಜೊತೆಗೆ ಚಿತ್ರದುರ್ಗ ರಾಜರ ಕಾಲದಲ್ಲಿ ಇದ್ದಂತಹ ಪಂಜಿನ ಕಲ್ಪನೆಯೊಂದಿಗೆ ಹತ್ತಿ ಬೀಜ ಸುಮಾರು 150 ಲೀಟರ್ ಎಣ್ಣೆಯಲ್ಲಿ ನೆನೆಸಿ ದೀಪ ಸಿದ್ದಗೊಳಿಸಿ ದೀಪೋತ್ಸವ ಮಾಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದು ಅವರು ಸಂಘಟನೆ ಚತುರ ಎಂಬುದನ್ನು ಮತ್ತೊಮ ಸಾಬೀತುಪಡಿಸಿದ್ದಾರೆ.

## ಫಾಸ್ಟ್ ನ್ಯೂಸ್

### ಆನ್‌ಲೈನ್ ಅರ್ಜಿ ಆಹ್ವಾನ

» ದಾವಣಗೆರೆ

ಪ್ರಸಕ್ತ ಸಾಲಿನಲ್ಲಿ ದಾಗಿನಕಟ್ಟೆ ಶ್ರೀ ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಥಮ ವರ್ಷದ ಡಿಪ್ಲೋಮ ಪ್ರವೇಶಕ್ಕೆ ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನಿಷ್ಠ ಶೇ.35 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು www.dtek.kar.nic.in ವೆಬ್‌ಸೈಟ್ ಮೂಲಕ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಮೇ.21 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಶ್ರೀ ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್ ದಾಗಿನಕಟ್ಟೆ ಇವರನ್ನು ಅಥವಾ ದೂ.ಸಂ.9448414180, 9844197172, 8861360348 ಗೇ ಸಂಪರ್ಕಿಸಲು ಕೋರಲಾಗಿದೆ.

### ಅರ್ಜಿ ಆಹ್ವಾನ

» ದಾವಣಗೆರೆ

ಪ್ರಸಕ್ತ ಸಾಲಿನಲ್ಲಿ ಪ್ರಥಮ ವರ್ಷದ ಸಿವಿಲ್ ಇಂಜಿನಿಯರಿಂಗ್ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಪ್ರವೇಶಕ್ಕೆ ಮೇ 9 ರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು www.dtek.kar.gov.in/dtetech.kar.gov.in/kartechnical ವೆಬ್‌ಸೈಟ್ ಮೂಲಕ ಅರ್ಜಿ ಪಡೆದು ತಮ್ಮ ಮೂಲ ದಾಖಲಾತಿಗಳೊಂದಿಗೆ ಮೇ.21 ರ ಸಂಜೆ 5:30 ಗಂಟೆಯೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಹರಿಹರ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ತಿಳಿಸಿದ್ದಾರೆ.

### ಫಸಲ್ ಬಿಮಾ ಯೋಜನೆ, ಬೆಳೆ ಕಟಾವು ಪ್ರಯೋಗದ ಲೋಪ ಸರಿಪಡಿಸಿ

» ದಾವಣಗೆರೆ

ಮುಂಗಾರು ಹಂಗಾಮಿನ ಫಸಲ್ ಬಿಮಾ ಯೋಜನೆಯಡಿ ಬೆಳೆ ಕಟಾವು ಪ್ರಾಯೋಗಿಕ ಪರೀಕ್ಷೆಯಲ್ಲಿ ಕೆಲವು ವ್ಯತ್ಯಾಸಗಳಾಗಿದ್ದು ಇವುಗಳನ್ನು ಸರಿಪಡಿಸಿ ರೈತರಿಗೆ ಬೆಳೆ ವಿಮಾ ಪರಿಹಾರ ಒದಗಿಸಬೇಕೆಂದು ಜಿಲ್ಲಾಧಿಕಾರಿ ಡಾ: ವೆಂಕಟೇಶ್ ಎಂ.ವಿ ತಿಳಿಸಿದರು. ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೃಷಿ ವಿಮಾ ಕಂಪನಿ ಅಧಿಕಾರಿಗಳು, ಕೃಷಿ ಅಧಿಕಾರಿಗಳು ಹಾಗೂ ಸಾಂಖ್ಯಿಕ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಂಗಾರು ಹಂಗಾಮಿನಲ್ಲಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮಾ ಕಂತು ಪಾವತಿಸಿದ ರೈತರಿಗೆ ವಿಮಾ ಪರಿಹಾರ ನೀಡಲು ಜಿಲ್ಲೆಯಲ್ಲಿ 40 ಬೆಳೆ ಕಟಾವು ಪರೀಕ್ಷೆ ನಡೆಸಲಾಗಿದ್ದು ಇದರಲ್ಲಿ 17 ಕಡೆ ಮಾಡಿದ ಬೆಳೆ ಕಟಾವು ಪ್ರಾಯೋಗಿಕ ಪರೀಕ್ಷೆ ನಡೆಸಿ ಅಪ್‌ಲೋಡ್ ಮಾಡಿದ ಕೆಲವು ವೀಡಿಯೋಗಳಲ್ಲಿನ ಅಂಶಗಳ ಬಗ್ಗೆ ವಿಮಾ ಕಂಪನಿಯ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದ್ದು ಇವುಗಳ ಬಗ್ಗೆ ಪರಿಶೀಲನೆ ನಡೆಸಿ ಇತ್ಯರ್ಥ ಮಾಡಲಾಯಿತು. ಕೆಲವೊಂದು ಪ್ರಯೋಗಗಳಲ್ಲಿ ನಿಗದಿತ ಸರ್ವೆ ನಂಬರ್ ಬದಲಾಗಿ ಬೇರೆ ಸರ್ವೆ ನಂಬರ್‌ನಲ್ಲಿ ಬೆಳೆ ಕಟಾವು ಪರೀಕ್ಷೆಗಳನ್ನು ಮಾಡಲಾಗಿದ್ದು ಇದು ಮಳೆಯಾಶ್ರಿತ ಅಥವಾ ನೀರಾವರಿ ಆಶ್ರಿತವೋ ಎಂಬ ಬಗ್ಗೆ ವಿಮಾ ಕಂಪನಿ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದಾಗ ನೀರಾವರಿ ಅಧಿಸೂಚಿತ ಪ್ರದೇಶವಲ್ಲ ಎಂದು ಸ್ಪಷ್ಟಪಡಿಸಿ ಜಿಲ್ಲೆಯಲ್ಲಿ ಶೇ 70 ಕ್ಕಿಂತ ಅಧಿಕ ಮಳೆಯ ಕೊರತೆಯಾಗಿದ್ದು ಶತಮಾನದಲ್ಲಿಯೇ ಅತ್ಯಂತ ಭೀಕರ ಬರಗಾಲವಾಗಿರುತ್ತದೆ. ಆಗಸ್ಟ್‌ನಲ್ಲಿ ಎಷ್ಟು ಮಳೆ ಬರಬೇಕಾಗಿತ್ತು, ಅದರಲ್ಲಿ ತೀವ್ರ ಕೊರತೆ ಉಂಟಾಗಿದ್ದರಿಂದ ಜಿಲ್ಲೆಯಾದ್ಯಂತ ಬೆಳೆಹಾನಿಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ವಿಮಾ ಕಂಪನಿಯ ಅಧಿಕಾರಿಗಳಿಗೆ ಸ್ಪಷ್ಟಪಡಿಸಿ ರೈತರ ಹಿತದೃಷ್ಟಿಯಿಂದ ರೈತರ ಪರವಾಗಿ ಎಲ್ಲರೂ ಕೆಲಸ ಮಾಡಬೇಕೆಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ವಿಮಾ ಕಂಪನಿ ವಲಯಾಧಿಕಾರಿ ಕೃಷ್ಣರಾಜ, ಸಾಂಖ್ಯಿಕ ಅಧಿಕಾರಿ ನೀಲಾ ಉಪಸ್ಥಿತರಿದ್ದರು.

### ರೈತರ ಬೆಳೆ ಪರಿಹಾರ ಬಿಡುಗಡೆ, ಸಹಾಯಕ್ಕೆ ಸಹಾಯವಾಣಿ

» ದಾವಣಗೆರೆ

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಮಳೆ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಬೆಳೆ ಹಾನಿ ಸಂಭವಿಸಿರುತ್ತದೆ. ರೈತರಿಗೆ ಬೆಳೆ ಪರಿಹಾರ ಬಿಡುಗಡೆಮಾಡಿದ್ದು ರೈತರಿಗೆ ಪರಿಹಾರ ಬಾರದಿದ್ದಲ್ಲಿ ಮಾಹಿತಿ ನೀಡಲು ದಾವಣಗೆರೆ ಉಪವಿಭಾಗದ ಮಟ್ಟದಲ್ಲಿ ಸಹಾಯವಾಣಿ ಪ್ರಾರಂಭವಾಗಿದ್ದು, ದಾವಣಗೆರೆ ಹರಿಹರ, ಜಗಳೂರು ತಾಲ್ಲೂಕುಗಳ ರೈತರು ಬೆಳೆ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ:08192–272955 ಗೆ ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಕರೆಮಾಡಬಹುದು ಎಂದು ಉಪವಿಭಾಗಾಧಿಕಾರಿ ದುರ್ಗಾಶ್ರೀ ತಿಳಿಸಿದ್ದಾರೆ.

# ಓದಲು ಬಾರದವರು ಶಿಕ್ಷಣ ಸಚಿವರಾಗಿದ್ದಾರೆ

» ಚಿತ್ರದುರ್ಗ

ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷ ಮಾಡುತ್ತಿದೆ, ಪ್ರತಿ ದಿನ ವಿವಿಧ ರೀತಿಯ ಆದೇಶಗಳನ್ನು ಮಾಡುವುದರ ಮೂಲಕ ಮಕ್ಕಳು ಹಾಗೂ ಶಿಕ್ಷಕರ ಮೇಲೆ ಒತ್ತಡವನ್ನು ಹೇರುವುದರ ಮೂಲಕ ಸರ್ವಾಧಿಕಾರಿ ಧೋರಣೆಯನ್ನು ನಡೆಸುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಚಿತ್ರದುರ್ಗ ನಗರದ ಬಿಜೆಪಿ ಕಚೇರಿಯಲ್ಲಿಂದು ನಡೆದ ಪದಾಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರಿಯಾಗಿ ಓದಲು ಬಾರದವರನ್ನು ಶಿಕ್ಷಣ ಸಚಿವನ್ನಾಗಿ ಕಾಂಗ್ರೆಸ್ ಸರ್ಕಾರ ಮಾಡಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿತ್ತು ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಯಾವುದೇ ರೀತಿಯ ಹೊರೆಯಾಗದ ರೀತಿಯಲ್ಲಿ ಇಲಾಖೆಯನ್ನು ನಡೆಸಲಾಗುತ್ತಿತ್ತು, ಅಲ್ಲದೆ ಶಿಕ್ಷಣದಲ್ಲಿ ನುರಿತರಾದವರನ್ನು ಈ ಇಲಾಖೆಗೆಮಂತ್ರಿಯನ್ನಾಗಿಮಾಡಲಾಗಿತ್ತು. ಆದರೆ ಶಿಕ್ಷಣ ಇಲಾಖೆಯ ಬಗ್ಗೆ ಅರಿವು ಇಲ್ಲದ ಕಾಂಗ್ರೆಸ್ ಪಕ್ಷ ಸರಿಯಾಗಿ ಮಾತನಾಡಲು ಬಾರದ ವ್ಯಕ್ತಿಯನ್ನು ಶಿಕ್ಷಣ ಮಂತ್ರಿಯನ್ನಾಗಿ ಮಾಡಿದ್ದಾರೆ ಆದರೆ ಈತ ದಿನಕ್ಕೊಂದು ಆದೇಶವನ್ನು ಮಾಡುವುದರ ಮೂಲಕ ಶಿಕ್ಷಕ ಮತ್ತು ಮಕ್ಕಳಿಗೆ ಹೊರೆಯಾಗುತ್ತಿದ್ದಾರೆ ಎಂದು ದೂರಿದರು.

ಬಿಜೆಪಿ ಪರಿಷತ್‌ನಿಂದಲೇ ತನ್ನ ಸದಸ್ಯತ್ವವನ್ನು ಪ್ರಾರಂಭ ಮಾಡಿತು. ಈಗ ಪರಿಷತ್ ನಲ್ಲಿ ನಮ್ಮ ಪಕ್ಷದ ಬಲ ಹೆಚ್ಚಾಗಿದೆ, ಇದೇ ರೀತಿ ಇದು ಮುಂದುವರೆಯಬೇಕಿದೆ, ಇಲ್ಲವಾದಲ್ಲಿ ಕಾಂಗ್ರೆಸ್‌ಸರ್ಕಾರತನಗೆಬೇಕಾದರೀತಿಯಲ್ಲಿ ಮಸೂದೆಗಳನ್ನು ಮಾಡಿಕೊಂಡು ಅದನ್ನು ಪರಿಷತ್‌ನಲ್ಲಿ ಪಾಸು ಮಾಡಿಕೊಳ್ಳುತ್ತಾರೆ ಇದರಿಂದ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ತೊಂದರೆಯಾಗಲಿದೆ ಇದಕ್ಕೆ




ಅವಕಾಶವನ್ನು ನೀಡಬಾರದೆಂದು ತಿಳಿಸಿದ ನಾರಾಯಣಸ್ವಾಮಿ, ಈಗ 6 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಇದರಲ್ಲಿ ಎಲ್ಲಾ ಸ್ಥಾನಗಳನ್ನು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಗೆಲ್ಲಬೇಕಿದೆ ಆಗ ಮಾತ್ರ ಪರಿಷತ್‌ನಲ್ಲಿ ನಮ್ಮ ಬಲ ಹೆಚ್ಚಾಗಲು ಸಾಧ್ಯವಿದೆ. ಇದೇ ರೀತಿ ಕಾಂಗ್ರೆಸ್ ಪಕ್ಷಕ್ಕೂ ಸಹಾ ಈ ಚುನಾವಣೆ ಗೆಲ್ಲುವ ಅನಿವಾರ್ಯತೆ ಇದೆ ಇದಕ್ಕೂ ಮುಂಚೆ ಬಿಜೆಪಿ ಗೆಲ್ಲಬೇಕಿದೆ ಇದಕ್ಕೆ ನೀವೆಲ್ಲರು ಸಾಥ್ ನೀಡಬೇಕಿದೆ ಎಂದರು.ರಾಜ್ಯ ಸರ್ಕಾರ ಈಗ ಇರುವ ಎರಡು ಪರೀಕ್ಷೆಯನ್ನು ಬಿಟ್ಟು ಮೂರು ಪರೀಕ್ಷೆಯನ್ನು ಮಾಡಲು ಹೊರಟ್ಟಿದೆ ಇದರ ಉಪಯೋಗ ಮಾತ್ರ ಸೊನ್ನೆಯಾಗಿದೆ ಇದರಿಂದ ಮಕ್ಕಳು ಮತ್ತು ಶಿಕ್ಷಕರ ಮೇಲೆ ಹೊರೆಯಾಗಿದೆ. ಇದ್ದಲ್ಲದೆ ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮಕ್ಕಳು ಹೆದರುವ ಹಾಗೇ ಸಿಸಿ ಕ್ಯಾಮರ, ಹಾಗೂ ವೆಬ್ ಕ್ಯಾಮರವನ್ನು ಹಾಕಿಸಿ ಪರೀಕ್ಷೆಯನ್ನು ನಡೆಸಿದ್ದಾರೆ ಇದರಿಂದ ಮಕ್ಕಳು ಹೆದರಿದ್ದಾರೆ ಈ ಹಿನ್ನಲೆಯಲ್ಲಿ ಪರೀಕ್ಷೆಯಲ್ಲಿ ಫಲಿತಾಂಶದಲ್ಲಿ ಹಿನ್ನಡೆಯಾಗಿದೆ ಇದ್ದಲ್ಲದೆ 20 ಅಂಕಗಳನ್ನು ಗ್ರೇಸ್‌ಆಗಿ ನೀಡಿದ್ದಾರೆ. ಪರೀಕ್ಷೆಯಲ್ಲಿ ಮಕ್ಕಳು ಕಾಪಿ ಹೊಡೆದರೆ ಅದರ ಶಿಕ್ಷೆ ಶಿಕ್ಷಕರಿಗೆ ಆಗುತ್ತಿದೆ. ಸರ್ಕಾರ ಶಿಕ್ಷಣ ಇಲಾಖೆಯ ಮೇಲೆ ಸರ್ವಾಧಿಕಾರಿ ಧೋರಣೆಯನ್ನು ನಡೆಸುತ್ತಿದೆ. ಶಿಕ್ಷಣ ಸಚಿವರು ಹಿಟ್ಲರ್ ಆಡಳಿತವನ್ನು ನೀಡುತ್ತಿದ್ದಾರೆ ಎಂದು ದೂರಿದರು.

ಪರೀಕ್ಷೆಯಲ್ಲಿ ಕಡಿಮೆ ಫಲಿತಾಂಶ ಬಂದರೆ ಅಂತಹ ಶಿಕ್ಷಕರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ ಅಂತಹ ಶಿಕ್ಷಕರ ಬಡ್ತಿಯನ್ನು ಕಡಿತ ಮಾಡಲಾಗುತ್ತಿದೆ ಅನುದಾನಶಾಲೆಯಅನುದಾನವನ್ನುಕಡಿತ ಮಾಡಲು ಸರ್ಕಾರ ಮುಂದಾಗಿರುವುದು ದುರಂತವಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರ ನಡೆಸಿದಾಗಲೆಲ್ಲಾ ಸಹಾ ಶಿಕ್ಷಣ ಇಲಾಖೆಯ ಮಲತಾಯೀ ದೋರಣೆಯನ್ನು ಅನುಸರಿಸುತ್ತಿದೆ, ಶಿಕ್ಷಕರಿಗೆ ಶಾಂತಿಯುತವಾಗಿ ಕೆಲಸ ಮಾಡಲು ಬಿಡುವುದಿಲ್ಲ ಏನಾದರೂ ಆದೇಶವನ್ನು ನೀಡುವುದರ ಮೂಲಕ ಕಿರುಕುಳವನ್ನು ನೀಡಲಾಗುತ್ತಿದೆ. ಇದರ ವಿರುದ್ದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ವಿರುದ್ದ ಮತವನ್ನು ಚಲಾಯಿಸುವುದರ ಮೂಲಕ ಬಿಜೆಪಿಯನ್ನು ಗೆಲ್ಲಿಸುವ ಕಾರ್ಯವನ್ನು ಮಾಡಬೇಕಿದೆ ಈಗ ಸಮಯ ಬಹಳ ಕಡಿಮೆ ಇದೆ ಇರುವ ಸಮಯದಲ್ಲಿಯೇ ಮತದಾರರನ್ನು ಭೇಟಿ ಮಾಡುವುದರ ಮೂಲಕ ಮತಯಾಚನೆಯನ್ನು ಮಾಡಬೇಕಿದೆ ಈ ಕ್ಷೇತ್ರ ಬಹಳ ದೊಡ್ಡದಿದೆ, 34 ಎಂಎಲ್.ಎ.5 ಎಂ.ಪಿ.ಗಳನ್ನು ಬರುತ್ತಾರೆ. 466 ಕಿ.ಮೀ ಸುತ್ತಳತೆ ಇದೆ. ಇಲ್ಲಿ ಎಲ್ಲರು ನಾವೇ ಅಭ್ಯರ್ಥಿ ಎಂದು ಮತದಾರರನ್ನು ಭೇಟಿ ಮಾಡಿ ಮತವನ್ನು ಕೇಳುವಂತೆ ಮನವಿ ಮಾಡಿದರು.

ಈ ಚುನಾವಣೆಯಲ್ಲಿ ಪಕ್ಷಕ್ಕೆ ದ್ರೋಹವನ್ನು ಮಾಡಿದವರು ಸ್ಪರ್ದೆ ಮಾಡಿದ್ದಾರೆ, ಇವರಿಗೆ ತಕ್ಕ ಪಾಠವನ್ನು ಈ ಚುನಾವಣೆಯಲ್ಲಿ ಕಲಿಸಬೇಕಿದೆ, ಇಲ್ಲಿ ಜಾತಿ, ಹಣ, ದೌರ್ಜನ್ಯ, ದಬ್ಬಾಳಿಕೆ, ಕುತಂತ್ರ ನಡೆಯುವುದಿಲ್ಲ ಪ್ರೀತಿ, ವಿಶ್ವಾಸ, ಮಾನವೀಯತೆಯಿಂದ ಮಾತ್ರ ಗೆಲುವು ಸಾಧ್ಯವಿದೆ ಎಂದು ನಾರಾಯಣಸ್ವಾಮಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಕೆ.ಎಸ.ನವೀನ್ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಪಕ್ಷ ಆರು ವಿಧಾನ ಸಭಾ ಕ್ಷೇತ್ರಗಳಿಗೆ ಸಹಾ ಅಭ್ಯರ್ಥಿಗಳನ್ನು ಹಾಕಿದೆ, ಇದರಲ್ಲಿ ಗೆಲುವು ಸಾಧಿಸಬೇಕಿದೆ, ಇದಕ್ಕೆ ಎಲ್ಲರ ಸಹಾಯ ಮತ್ತು ಸಹಕಾರ ಅಗತ್ಯ ಇದೆ ಇದು ಬೇರೆ ಚುನಾವಣೆಯಂತೆ ಅಲ್ಲ ಬುದ್ದಿವಂತ ಮತದಾರರು ಇಲ್ಲಿ ಇದ್ದಾರೆ ಇವರ ಮನವೊಲಿಸಿ ಮತವನ್ನು ಕೇಳಬೇಕಿದೆ, ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಶಿಕ್ಷಕರಿಗೆ ಉತ್ತಮ ರೀತಿಯಾದ ಸೌಲಭ್ಯವನ್ನು ನೀಡಿದೆ ನಾರಾಯಣಸ್ವಾಮಿಯವರು ಸಹಾ ತಮ್ಮ ಅವಧಿಯಲ್ಲಿ ಶಿಕ್ಷಕರ ಪರವಾಗಿ ಕೆಲಸವನ್ನು ಮಾಡಿದ್ದಾರೆ. ಮುಂದೆಯೂ ಸಹಾ ಅವರ ಸೇವೆ ಬೇಕಾದರೆ ಅವರನ್ನು ಈ ಚುನಾವಣೆಯಲ್ಲಿ ಗೆಲ್ಲಿಸಬೇಕಿದೆ. ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷ ತನ್ನ ಪ್ರನಾಳಿಕೆಯನ್ನು ಶಿಕ್ಷಕರಿಗೆ ವಿವಿಧ ರೀತಿಯ ಭರವಸೆಯನ್ನು ನೀಡಿತ್ತುಆದರೆಅವುಗಳನ್ನುಈಡೇರಿಸುವಲ್ಲಿ ವಿಫಲವಾಗಿದೆ ಇದರಿಂದ ಶಿಕ್ಷಕರು ಅತಿಥಿ ಉಪನ್ಯಾಸಕರು ಹೋರಾಟವನ್ನು ಮಾಡಿದರು, ಕಾಂಗ್ರೆಸ್ ಪಕ್ಷ ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷ ಮಾಡಿದೆ. ಈ ಕ್ಷೇತ್ರದಲ್ಲಿ ಟಿಕೇಟ್ ಪಡೆದಿರುವ ಕಾಂಗ್ರೆಸ್ ಅಭ್ಯರ್ಥಿ ಈ ಹಿಂದೆ ಬಿಜೆಪಿಯಲ್ಲಿದ್ದು ಅಧಿಕಾರವನ್ನು ಅನುಭವಿಸಿ ಈಗ ಮತ್ತೇ ಅಧಿಕಾರಕ್ಕಾಗಿ ಬೇರೆ ಪಕ್ಷವನ್ನು ಸೇರಿದ್ದಾರೆ ಇಂತಹರಿಗೆ ತಕ್ಕ ಪಾಠವನ್ನು ಚುನಾವಣೆಯಲ್ಲಿ ಕಲಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷರಾದ ಮುರಳಿ ಮಾಜಿ ಶಾಸಕರಾದ ತಿಪ್ಪೇಸ್ವಾಮಿ, ಎಸ್.ಸಿ.ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ್ ಕಾರಜೋಳ, ಸಂಪತ್ ಕುಮಾರ್, ವಕ್ತಾರರಾದ ನಾಗರಾಜ್ ಬೇದ್ರೇ, ದಗ್ಗೆ ಶಿವಪ್ರಕಾಶ್ ಅಜ್ಜಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.




**ಚಿತ್ರದುರ್ಗ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಹುಟ್ಟು ಹಬ್ಬವನ್ನು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದಿಂದ ಕೇಕ್ ಕತ್ತರಿಸುವ ಮೂಲಕ ಸರಳವಾಗಿ ಆಚರಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಪ್ರಧಾನ ಕಾರ್ಯದರ್ಶಿಗಳಾದ ಕೆ.ಪಿ.ಸಂಪತ್‌ಕುಮಾರ್, ಡಿ.ಎನ್.ಮೈಲಾರಪ್ಪ, ಉಪಾಧ್ಯಕ್ಷ ಎಸ್.ಎನ್.ರವಿಕುಮಾರ್, ನೇತ ತಿಪ್ಪೇಸ್ವಾಮಿ, ನಗರ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷೆ ಸುಧಾ, ಡಿ.ಕೆ.ಶಿ. ಅಭಿಮಾನಿ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್, ತಾಲ್ಲೂಕು ಅಧ್ಯಕ್ಷ ಅನಿಲ್‌ಕುಮಾರ್ ಇನ್ನು ಅನೇಕರು ಹುಟ್ಟು ಹಬ್ಬದ ಸಂಭ್ರಮಾಚರಣೆಯಲ್ಲಿದ್ದರು.**

## ತಂಬಾಕು ಅಂಗಡಿಗಳ ಮೇಲೆ ದಾಳಿ; 35 ಪ್ರಕರಣ ದಾಖಲು, ರೂ.3650 ದಂಡ ವಸೂಲಿ

» ಚಿತ್ರದುರ್ಗ

ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಕೋಟ್ಪಾ–2003ರ ಕಾಯ್ದೆಯ ಕುರಿತು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ಬುಧವಾರ ಚಿತ್ರದುರ್ಗ ನಗರದ ಸಂತೆಹೊಂಡ, ಗಾಂಧಿನಗರದ ವಿವಿಧ ಪ್ರದೇಶಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತಂಬಾಕು ತನಿಖಾ ತಂಡವು ತಂಬಾಕು ಉತ್ಪನ್ನಗಳ ಮಾರಾಟಗಾರರ ಅಂಗಡಿಗಳಿಗೆ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ದಾಳಿ ನಡೆಸಿ, ದಂಡ ವಿಧಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡದಂತೆ, ಪಾನ್ ಮಸಾಲ, ತಂಬಾಕು ಜಗಿದು ಉಗಿಯದಂತೆ ಸಾರ್ವಜನಿಕರಲ್ಲಿ ಮತ್ತು ಅಂಗಡಿ ಮಾಲೀಕರಿಗೆ ಎಚ್ಚರಿಸಿ ಜಾಗೃತಿ ಮೂಡಿಸಲಾಯಿತು. ಸಂಬಂಧಪಟ್ಟ ಸೆಕ್ಷನ್–4, 6ಎ ಮತ್ತು 6ಬಿ ಬೋರ್ಡ್‌ಗಳನ್ನು ಹಾಕಲು ಸೂಚಿಸಲಾಯಿತು. ಸೆಕ್ಷನ್–4 ಅಡಿಯಲ್ಲಿ 28 ಪ್ರಕರಣ ದಾಖಲಿಸಿ ರೂ. 2925/– ದಂಡವನ್ನು ಮತ್ತು ಸೆಕ್ಷನ್–6ಎ ಅಡಿಯಲ್ಲಿ 07 ಪ್ರಕರಣ ದಾಖಲಿಸಿ ರೂ.725/– ದಂಡವನ್ನು ವಸೂಲಿ ಮಾಡಲಾಯಿತು.ತಂಬಾಕು ದಾಳಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತನಿಖಾ ತಂಡದ ಅಧಿಕಾರಿಗಳಾದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಬಿ.ಎಂ.ಪ್ರಭುದೇವ, ಸಮಾಜ ಕಾರ್ಯಕರ್ತ ಕೆ.ಎಂ.ತಿಪ್ಪೇಸ್ವಾಮಿ, ಪೊಲೀಸ್ ಇಲಾಖೆಯ ಶೃಂಗಾರ ಸಾಗರ್, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರಂಗಾರೆಡ್ಡಿ, ಆರೋಗ್ಯ ನಿರೀಕ್ಷಣಾಧಿಕಾರಿ ನಾಗರಾಜ್ ಇದ್ದರು.

## ಸಾರ್ವಜನಿಕರಿಗೆ ತಲೆನೋವಾಗಿರುವ ನೊಂದಣಿ ಇಲಾಖೆ ನೂತನ ಆದೇಶ

ಮೊದಲ ಪುಟದಿಂದ: ಇದರಿಂದ ಗ್ರಾಮೀಣ ಭಾಗವೂ ಸೇರಿದಂತೆ ದೂರದೂರಿನಿಂದ ಆಗಮಿಸುವವರಿಗೆ ಹೆಚ್ಚಿನ ತೊಂದರೆ ಉಂಟಾಗಲಿದೆ. ಸಮಯವನ್ನು ನಿಗದಿಪಡಿಸುವುದರಿಂದ ಸಾಮಾನ್ಯವಾಗಿ ಎಲ್ಲರಲ್ಲೂ ಅಘಾತ ಉಂಟಾಗಲಿದೆ. ಅನಿವಾರ್ಯವಾಗಿ ಸಮಯ ಪಾಲನೆ ಮಾಡಬೇಕಾಗಿದೆ. ಲಕ್ಷಾಂತರ ನೊಂದಾಣೆ ಶುಲ್ಕ ನೀಡಿ ಸಾವಿರಾರು ರೂ ವೆಚ್ಚ ಮಾಡಿಕೊಂಡು ಕಚೇರಿಗೆ ಬಂದರೆ ಅವರ ಕೆಲಸ ಆಗುವ ಭರವಸೆ ಇರುವುದಿಲ್ಲ. ಇದರಿಂದ ಹೆಚ್ಚಿನ ತೊಂದರೆ ಸಾರ್ವಜನಿಕರಿಗೆ ಆಗುತ್ತಲಿದೆ. ಇಲಾಖೆ ಈ ನಿಟ್ಟಿನಲ್ಲಿ ಮತ್ತೊಮ್ಮೆ ಚಿಂತನೆ ನಡೆಸಿ ಸಮಯ ನಿಗದಿಪಡಿಸುವುದನ್ನು ಕೈಬಿಟ್ಟು ಕರ್ತವ್ಯದ ದಿನದಲ್ಲಿ ಯಾವುದೇ ಸಮಯದಲ್ಲಿ ಬಂದರೂ ಸಂಬಂಧಪಟ್ಟ ಕಚೇರಿಯ ಅಂದಿನ ಕೆಲಸ ಕಾರ್ಯನೋಡಿಕೊಂಡು ನೊಂದಾವಣೆ ಮಾಡಿಕೊಟ್ಟಲ್ಲಿ ಹೆಚ್ಚು ಅನುಕೂಲವಾಗಲಿದೆ. ಈಗಾಗಲೇ ಸಾರ್ವಜನಿಕವಾಗಿ ನೊಂದಾವಣಾಧಿಕಾರಿಗಳ ಕಚೇರಿಯಲ್ಲಿ ಕೆಲಸವಾಗುವುದೇ ವಿಳಂಬವಾಗಿರುವಾಗ ಇಂತಹ ಹೊಸ ಕಾನೂನು ಜಾರಿಗೆ ತಂದು ಸಾರ್ವಜನಿಕರಿಗೆ ತೊಂದರೆ ಕೊಡುವುದು ಸರಿಯಲ್ಲ. ಈ ನಿಟ್ಟಿನಲ್ಲಿ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು ಚಿಂತನೆ ನಡೆಸಿ ಅನುಕೂಲವಾಗುವ ನಿಯಮಗಳನ್ನು ಜಾರಿಗೆ ತರಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಪ್ರಮುಖ ಸುದ್ದಿ

"ಜಿಲ್ಲಾ ಜನಜಾಗೃತಿ ವೇದಿಕೆ ಟ್ರಸ್ಟ್ ಅಧ್ಯಕ್ಷ ಓಂಕಾರಪ್ಪ"

# ಕುಟುಂಬ ಹಾಳಾಗಲು ಮದ್ಯ ವ್ಯಸನ ದಾರಿ ಮಾಡಿಕೊಡುತ್ತದೆ

» ಹೊಸದುರ್ಗ

ತಂದೆತಾಯಿ ಕಷ್ಟಪಟ್ಟು ದುಡಿದು ಮಕ್ಕಳಿಗೆ ಸಂಸ್ಕಾರ ಕಲಿಸಬೇಕು ಇಲ್ಲದಿದ್ದರೆ ಆ ಮಕ್ಕಳು ಮುಂದಿನ ನಿಮ್ಮ ಕುಟುಂಬದ ಅವನತಿಗೆ ಕಾರಣರಾಗಬಲ್ಲರು ಮತ್ತು ಈ ಮಧ್ಯವಸನದಿಂದ ಸಂಸ್ಕಾರ ಕುಟುಂಬವೊಂದು ಬೀದಿ ಪಾಲಾಗುವುದು ಎಂದು ರಾಜ್ಯ ಜನಜಾಗೃತಿ ವೇದಿಕೆ ಟ್ರಸ್ಟ್ ಚಿತ್ರದುರ್ಗ ಜಿಲ್ಲಾಧ್ಯಕ್ಷ ಬಿ.ಪಿ.ಓಂಕಾರಪ್ಪ ತಿಳಿಸಿದರು.

ನಗರದ ರಾಧಾಕೃಷ್ಣ ಸಭಾಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಜನಜಾಗೃತಿ ವೇದಿಕೆ ಟ್ರಸ್ಟ್ ಚಿತ್ರದುರ್ಗ ಜನಜಾಗೃತಿ ವೇದಿಕೆ ಸದಸ್ಯರ ತ್ರೈಮಾಸಿಕ ಸಭೆಯಲ್ಲಿಮಾತನಾಡಿದಅವರುಧರ್ಮಸ್ಥಳ ವೀರೇಂದ್ರ ಹೆಗ್ಡೆಯವರು ಮಧ್ಯವರ್ಜನ ಶಿಬಿರ ಹಾಗೂ ವಿದ್ಯಾರ್ಥಿಗಳಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಜನಜಾಗೃತಿ ವೇದಿಕೆ ಟೆಸ್ಟ್ ಮೂಲಕ ಮಾಡಿ ಸುಸಂಸ್ಕೃತ ಸಮಾಜಕ್ಕೆ ಅಡಿಪಾಯ ಹಾಕಿದ್ದಾರೆ. ಜಾತಿ, ಮತ ,ವರ್ಣ, ವರ್ಗದ ಎಲ್ಲೆ ಮೀರಿ ಧರ್ಮಸ್ಥಳದ ಪೂಜ್ಯರು ಕೆಲಸ ಮಾಡುತ್ತಿದ್ದು ಮಧ್ಯಮುಕ್ತ ,ಮಾದಕ ಮುಕ್ತ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವುದು ವೀರೇಂದ್ರ ಹೆಗ್ಗಡೆಯವರು ಮತ್ತು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶಯವಾಗಿದೆ ಎಂದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ದ ಸಂಸ್ಥೆಯ ಚಿತ್ರದುರ್ಗ ಜಿಲ್ಲೆಯ ಯೋಜನಾ ನಿರ್ದೇಶಕ ದಿನೇಶ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ಸಮೂಹ ಮಾದಕ ದ್ರವ್ಯದಂತಹ ಕೆಟ್ಟ ಚಟಗಳಿಗೆ ಬಲಿಯಾಗುತ್ತಿರುವುದು ವಿಷಾಧನೀಯ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಶಾಲಾ–ಕಾಲೇಜುಗಳಲ್ಲಿ ದುಶ್ಚಟದ ಅರವಿನ ಬಗ್ಗೆ ವಿಧ ಕಾರ್ಯಕ್ರಮಗಳನ್ನ ಮಾಡುವುದರ ಮೂಲಕ ಯುವ ಸಮೂಹಕ್ಕೆ ಸುಸಂಸ್ಕೃತ ಸಮಾಜವನ್ನು ನಿರ್ಮಾಣ ಮಾಡಲು ಪೂಜ್ಯ ವೀರೇಂದ್ರ ಹೆಗ್ಗಡೆಯವರು ಜಿಲ್ಲಾ ಜನಜಾಗೃತಿ ವೇದಿಕೆಯು ಈ ವರ್ಷದಲ್ಲಿ ನೂರಾರು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಮತ್ತು ಚಳ್ಳಕೆರೆ,ಹಾಲುರಾಮೇಶ್ವರ, ಹಿರಿಯೂರು, ಭರಮಸಾಗರ ವಲಯ ವ್ಯಾಪ್ತಿಯಲ್ಲಿ ನಾಲ್ಕು ಮಧ್ಯವರ್ಜನ ಶಿಬಿರ ಆಯೋಜನೆ ಮಾಡಿ ಚಿತ್ರದುರ್ಗ ಜಿಲ್ಲೆಯ ಸುಮಾರು 300 ಕ್ಕೂ ಹೆಚ್ಚು ಕುಟುಂಬಗಳಿಗೆ ಮಧ್ಯಮುಕ್ತ ಬದುಕು ಕಟ್ಟಿಕೊಳ್ಳಲು ಜಿಲ್ಲಾ ಜನಜಾಗೃತಿ ವೇದಿಕೆ ಶ್ರಮಿಸಿದೆ ಎಂದರು.ಚಿತ್ರದುರ್ಗ ಜಿಲ್ಲಾ ಜನಜಾಗೃತಿ ಯೋಜನಾ ನಿರ್ದೇಶಕ ನಾಗರಾಜ್ ಮಾತನಾಡಿ, ಧರ್ಮಸ್ಥಳದ ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮಧ್ಯಮುಕ್ತ ಚುನಾವಣೆ ನಡೆಯಬೇಕೆಂಬ ಉದ್ದೇಶದಿಂದ ನಮ್ಮ ಧರ್ಮಸ್ಥಳ ಸಂಸ್ಥೆಯ ಸದಸ್ಯರು ಇಡೀ ರಾಜ್ಯದಾದ್ಯಂತ ಮಧ್ಯಮುಕ್ತ ಕರಪತ್ರಗಳನ್ನ ಮನೆ ಮನೆಗೆ ಹಂಚಿ ಮಧ್ಯಮುಕ್ತ ಚುನಾವಣೆ ಮಾಡಲು ಜಾಗೃತಿ ಮೂಡಿಸಿದ್ದರು ಮತ್ತೆ ವ್ಯಸನ ಮುಕ್ತ ನಾಡು ನಮ್ಮದಾಗಬೇಕೆಂಬ ಸಂಕಲ್ಪವನ್ನು ನಾವು ನೀವುಗಳೆಲ್ಲಾ ಮಾಡಬೇಕಿದೆ. ತಾಲೂಕಿಗೆ ಒಂದರಂತೆ ಪಾನಮುಕ್ತ ಗ್ರಾಮ ಮಾಡಲು ಶ್ರಮಿಸಬೇಕು. ಪೂಜ್ಯರು ರಾಜ್ಯ ಜನ ಜಾಗೃತಿ ವೇದಿಕೆಯಿಂದ ಮಧ್ಯಮುಕ್ತ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಕ್ಕೆ ಈ ಬಾರಿ ಇಂತಹ ಕಾರ್ಯಕ್ರಮಗಳನ್ನು ರೂಪಿಸಲು ಮೂರು ಕೋಟಿ ಅನುದಾನ ನೀಡಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಮಂಜುನಾಥ್, ನಿಕಟಪರ್ವ ಅಧ್ಯಕ್ಷ ಮಾರುತೇಶ್, ಹಿರಿಯೂರು ಜಿಲ್ಲಾ ಯೋಜನಾ ನಿರ್ದೇಶಕ ವಿನಯ್ ಕುಮಾರ್ ಸುವರ್ಣ, ಹೊಸದುರ್ಗ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಶಿವಣ್ಣ, ಕರ್ನಾಟಕ ಜನ ಜಾಗೃತಿ ಟ್ರಸ್ಟ್ ಚಿತ್ರದುರ್ಗ ಜಿಲ್ಲಾ ಸದಸ್ಯರಾದ ಕಿರಣ್ ಜೈನ್, ತಿಪ್ಪಮ್ಮ ,ಜಗದೀಶ್ ಬಿಸನಹಳ್ಳಿ, ಇಲ್ಕಲ್ ಅಶೋಕ್, ಬೋರೇಶ್ , ಸರಸ್ವತಿ, ತುಂಬಿನಕೆರೆ ಬಸವರಾಜ್,ಸಿಂಧು ಅಶೋಕ್, ರಂಗಸ್ವಾಮಿ, ನೇತಾಜಿ ಪ್ರಸನ್ನ ಸೇರಿದಂತೆ ಜಿಲ್ಲಾ ಜನ ಜಾಗೃತಿ ವೇದಿಕೆಯ ಸದಸ್ಯರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನೌಕರರು ಹಾಜರಿದ್ದರು.

## ಫಾಸ್ಟ್ ನ್ಯೂಸ್

### ಅಂತರ್ಜಲ ಬಳಕೆಗೆ ಎನ್.ಓ.ಸಿ.ಕಡ್ಡಾಯ

ದಾವಣಗೆರೆ:ಜಿಲ್ಲೆಯಲ್ಲಿ ಪ್ರಸ್ತುತ ಇರುವ ಹಾಗೂ ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆ, ವಾಣಿಜ್ಯ, ಮೂಲ ಸೌಕರ್ಯ ಅಭಿವೃದ್ಧಿ, ಗಣಿಗಾರಿಕೆ, ಮನರಂಜನೆ ಯೋಜನೆಗಳಿಗೆ ಅಂತರ್ಜಲ ಬಳಕೆದಾರರು ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆಯಬೇಕು. ಆದ್ದರಿಂದ ಸಂಬಂಧಪಟ್ಟ ಎಲ್ಲಾ ಅಂತರ್ಜಲ ಬಳಕೆದಾರರು ನಿರಾಕ್ಷೇಪಣಾ ಪತ್ರ ಪಡೆಯಲು https://kgwa.in/Public/ https://antharjala karnataka.gov.in ವೆಬ್‌ಸೈಟ್‌ನಲ್ಲಿ ಸಲ್ಲಿಸಿ.

### ಇಬ್ಬರು ಮಕ್ಕಳೊಂದಿಗೆ ಮಹಿಳೆ ಕಾಣೆ

ಚಿತ್ರದುರ್ಗ: ನಗರದ ಸಂಜಿದಾಬಾನು ಗಂಡ ಅಕ್ಬರ್ (39 ವರ್ಷ) ಹಾಗೂ ಇಬ್ಬರು ಮಕ್ಕಳಾದ ಮುಬಾರಕ್ (17 ವರ್ಷ) ಖಲಂದರ್ (13 ವರ್ಷ) ಈ ಮೂವರು ವ್ಯಕ್ತಿಗಳು ಕಾಣೆಯಾಗಿರುವ ಕುರಿತು ಮೇ.12ರಂದು ಚಿತ್ರುದರ್ಗ ನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಸಂಜಿದಬಾನು 5ಅಡಿ ಎತ್ತರ ದುಂಡು ಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ ಹೊಂದಿದ್ದಾರೆ. ಮನೆಯಿಂದ ಹೋಗುವಾಗ ಕೆಂಪು ಬಣ್ಣದ ಚೂಡಿದಾರ ಧರಿಸಿರುತ್ತಾರೆ. ಮಕ್ಕಳಾದ ಮುಬಾರಕ್ 5 ಅಡಿ ಎತ್ತರ, ಖಲಂದರ್ 3.5 ಅಡಿ ಎತ್ತರ ಇದ್ದು, ತೆಳ್ಳನೆಯ ಮೈಕಟ್ಟು, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಕನ್ನಡ ಮತ್ತು ಉರ್ದು ಭಾಷೆ ಮಾತನಾಡುವರು. ಮನೆಯಿಂದ ಹೋಗುವಾಗ ಪ್ಯಾಂಟ್ ಶರ್ಟ್ ಧರಿಸಿರುತ್ತಾರೆ.ಈ ಮೇಲ್ಕಂಡವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ದೂರವಾಣಿ ಸಂಖ್ಯೆಗಳಾದ 9480803146, 08194-222430, 08194-422781 ಹಾಗೂ 08192-237830 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಮಹಿಳೆ ಕಾಣೆ

ಚಿತ್ರದುರ್ಗ: ನಗರದ ಸಂತೆ ಹೊಂಡದ ಬಳಿ ಕೆನ್ನೆಡಲು ಗ್ರಾಮದ ಪರಿಮಳ ಗಂಡ ಬಸವರಾಜ್ ಕಾಣೆಯಾಗಿರುವ ಕುರಿತು ಮೇ. 13 ರಂದು ಚಿತ್ರದುರ್ಗ ನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪರಿಮಳ ಉದ್ದನೆಯ ಮುಖ, ಸಾಧಾರಣ ಮೈಕಟ್ಟು, ನೀಳವಾದ ಕೂದಲು ಹೊಂದಿದ್ದು, ಕನ್ನಡ ಭಾಷೆ ಮಾತನಾಡುವರು. ಮನೆಯಿಂದ ಹೋಗುವಾಗ ಹಳದಿ ಕಲರ್ ಚೂಡಿದಾರ್ ಧರಿಸಿರುತ್ತಾರೆ. ಈ ಮೇಲ್ಕಂಡ ಮಹಿಳೆಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ದೂರವಾಣಿ ಸಂಖ್ಯೆಗಳಾದ 9480803146, 08194-222430, 08194-422781, 08192-237830 ಗೆ ಸಂಪರ್ಕಿಸಬಹುದು.

### ಸರ್ಕಾರದಿಂದ ಬೆಳೆ ಪರಿಹಾರ ಬಿಡುಗಡೆ, 11597 ರೈತರ ಖಾತೆಗಳು ವ್ಯತ್ಯಾಸ

# ಬೆಳೆ ಪರಿಹಾರ ಸಾಲಕ್ಕೆ ಮುರಿದುಕೊಳ್ಳಬಾರದು

» ದಾವಣಗೆರೆ

ಮುಂಗಾರು ಹಂಗಾಮಿನ ಬೆಳೆ ನಷ್ಟ ಪರಿಹಾರವಾಗಿ ಎರಡನೇ ಕಂತಿನಲ್ಲಿ ಜಿಲ್ಲೆಯ 69575 ರೈತರಿಗೆ ರೂ.44.35 ಕೋಟಿ ಇನ್‌ಫುಟ್ ಸಬ್ಸಿಡಿ ಬಿಡುಗಡೆ ಮಾಡಿದ್ದು ದಾಖಲಾತಿ ಹೊಂದಾಣಿಕೆಯಾಗದ 11597 ರೈತರಿಗೆ ಪರಿಹಾರ ಬಿಡುಗಡೆ ಮಾಡಲು ಬ್ಯಾಂಕ್ ಖಾತೆಯ ದಾಖಲಾತಿಗಳನ್ನು ಸರಿಪಡಿಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬ್ಯಾಂಕರ್ಸ್ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೊದಲ ಕಂತಿನಲ್ಲಿ ತಲಾ 2 ಸಾವಿರದಂತೆ 82928 ರೈತರಿಗೆ ಹಾಗೂ ಎರಡನೇ ಹಂತದಲ್ಲಿ 69575 ರೈತರಿಗೆ ಒಟ್ಟು ರೂ.60.23 ಕೋಟಿ ಬೆಳೆ ಪರಿಹಾರ ಬಿಡುಗಡೆ ಮಾಡಲಾಗಿದೆ ಎಂದರು.

ಇನ್ನೂ 11597 ರೈತರಿಗೆ ಇನ್‌ಫುಟ್ ಸಬ್ಸಿಡಿ ಬಿಡುಗಡೆ ಮಾಡಬೇಕಾಗಿದ್ದು ಇವರ ಖಾತೆಯ ವಿವರಗಳು ಸರಿಯಾಗಿರದ ಕಾರಣ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಇದರಲ್ಲಿ 5575 ರೈತರ ಖಾತೆಗಳಿಗೆ ಆಧಾರ್ ಜೋಡಣೆಯಾಗಿರುವುದಿಲ್ಲ.ಐಎಫ್‌ಎಸ್‌ಸಿ ಕೋಡ್ ತಪ್ಪಾಗಿರುವ 3696, ಫ್ರೋಟ್ಸ್ ಮತ್ತು ಆಧಾರ್‌ಗೆ ಮಿಸ್ ಮ್ಯಾಚ್ ಆಗಿರುವ 1684, ಆಧಾರ್ ಜೋಡಣೆಯಾಗದ 244 ಸೇರಿದಂತೆ ವಿಫಲ ಪಾವತಿ ಸೇರಿದಂತೆ ಇತರೆ ಕಾರಣದಿಂದ ಪಾವತಿ ಮಾಡಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು.

ಎಲ್ಲಾ ತಾಲ್ಲೂಕುಗಳಲ್ಲಿ ಪರಿಹಾರದ ಬಗ್ಗೆ ಸಹಾಯಕ್ಕಾಗಿ ಸಹಾಯವಾಣಿ ಸ್ಥಾಪಿಸಲಾಗಿದ್ದ ಇಲ್ಲಿಯವರೆಗೆ 1374 ಕರೆಗಳನ್ನು ಸ್ವೀಕರಿಸಲಾಗಿದೆ. ಬ್ಯಾಂಕ್‌ಗಳಲ್ಲಿ ಪ್ರತ್ಯೇಕವಾಗಿ ಸಹಾಯ ಮೇಜು ಸ್ಥಾಪನೆ ಮಾಡುವ ಮೂಲಕ ಆಧಾರ್ ಸೀಡಿಂಗ್ ಮಾಡುವುದು ಮತ್ತು ಆಧಾರ್‌ನಂತೆ ಬ್ಯಾಂಕ್ ಖಾತೆಯನ್ನು ತಿದ್ದುಪಡಿ ಮಾಡುವ ಮೂಲಕ ಆದಷ್ಟು ಬೇಗ ರೈತರ ಖಾತೆಗಳಿಗೆ ಪರಿಹಾರ ಜಮಾ ಮಾಡಲು ದಾಖಲೆಗಳನ್ನು ಸರಿಪಡಿಸುವ ಕೆಲಸವನ್ನು ಎಲ್ಲಾ ಬ್ಯಾಂಕ್‌ಗಳಿಂದಾಗಬೇಕಾಗಿದೆ ಎಂದರು.ಸಾಲಕ್ಕೆ ಪರಿಹಾರ ಜಮಾ ಮಾಡುವಂತಿಲ್ಲ; ರೈತರು ಬೆಳೆನಷ್ಟ ಅನುಭವಿಸಿದ್ದು ಇವರಿಗೆ ಇನ್‌ಫುಟ್ ಸಬ್ಸಿಡಿ, ಬೆಳೆ ವಿಮಾ ಪರಿಹಾರ ಹಾಗೂ ಉದ್ಯೋಗ ಖಾತರಿಯಡಿ ಕೂಲಿ ಹಣವನ್ನು ಖಾತೆಗೆ ಜಮಾ ಮಾಡಲಾಗಿದ್ದು ಇದನ್ನು ರೈತರು ಪಡೆದ ಸಾಲಕ್ಕೆ ತೀರುವಳಿ ಮಾಡಬಾರದು. ರೈತರು ಇವರಾರು ಬಿಎಂಡಬ್ಲಿಯೋ ಕಾರ್ ಇಟ್ಟುಕೊಂಡಿಲ್ಲ. ಅವರಿಗೆ ಸಿಗುವ ಹತ್ತಾರು ಸಾವಿರದಲ್ಲಿ ಬೀಜ, ಗೊಬ್ಬರಕ್ಕೆ ಉಪಯೋಗ ಮಾಡಿಕೊಳ್ಳುವರು. ಆದ್ದರಿಂದ ಯಾವುದೇ ಬ್ಯಾಂಕ್‌ನವರು ಬೆಳೆ ಪರಿಹಾರ, ಖಾತರಿ ಹಣವನ್ನು ಬಾಕಿ ಸಾಲಕ್ಕೆ ಮುರಿದುಕೊಳ್ಳಬಾರದೆಂದು ತಾಕೀತು ಮಾಡಿ ಅಂತಹ ಬ್ಯಾಂಕ್ ಅಧಿಕಾರಿಗಳ ಮೇಲೆ ಸರ್ಕಾರಕ್ಕ ವರದಿ ಮಾಡಲಾಗುತ್ತದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ ವಿಶೇಷಚೇತನರಿಗೆ ಬರುವ ಮಾಸಾಶನದ ಹಣವನ್ನು ಅವರ ಸಾಲಕ್ಕೆ ಚುಕ್ತಾ ಮಾಡಿಕೊಳ್ಳಲಾಗುತ್ತಿದೆ ಎಂದು ದೂರುಗಳಿದ್ದು ಸರ್ಕಾರ ಅವರ ಜೀವನ ಮಟ್ಟ ಸುಧಾರಣೆ ಮಾಡಲು ಮಾಸಾಶನ ನೀಡಲಾಗುತ್ತಿದ್ದು ಈ ರೀತಿಯಾಗದಂತೆ ಸೂಕ್ತ ನಿರ್ದೇಶನ ನೀಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಲೀಡ್ ಮ್ಯಾನೇಜರ್ ಪ್ರಕಾಶ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಭಗೀರಥ ಗಂಗೆಯನ್ನು ಭೂಮಿಗೆ ತಂದ ಛಲಗಾರ

» ದಾವಣಗೆರೆ

ಭಗೀರಥ ಮಹರ್ಷಿ ತನ್ನ ಘೋರ ತಪಸ್ಸಿನ ಮೂಲಕ ಕಠಿಣ ಕಾರ್ಯ ಪೂರೈಸಿ ಪವಿತ್ರ ಗಂಗೆಯನ್ನು ಭೂಮಿಗೆ ತಂದ ಚೈತನ್ಯದ ಚಿಲುಮೆ, ಛಲಗಾರ ಎಂದು ಜಿಲ್ಲಾಧಿಕಾರಿ ಡಾ; ವೆಂಕಟೇಶ ಎಂ.ವಿ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮತ್ತು ಉಪ್ಪಾರ ಸಮಾಜ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಭಗೀರಥ ಜಯಂತಿಯಲ್ಲಿ ಭಾಗವಹಿಸಿ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.



ಭಗೀರಥನ ಸಾಹಸಗಾಥೆಯು ನಿರ್ಣಯ, ಭಕ್ತಿ ಹಾಗೂ ಅಸಾಧ್ಯವಾದುದನ್ನು ಕಠಿಣ ಪ್ರಯತ್ನದ ಮೂಲಕ ಸಾಧ್ಯಮಾಡುವುದನ್ನು ತೋರಿಸಿಕೊಟ್ಟವರು. ಭಗೀರಥ ಮಹಷೀ ತನ್ನ ಘೋರ ತಪಸ್ಸಿನಿಂದ ಪವಿತ್ರ ಗಂಗೆಯನ್ನು ಭೂಮಿಗೆ ತಂದು ತನ್ನ ಹಿರಿಯರಿಗೆ ಜಲತರ್ಪಣ ಮಾಡಿದ ಭಗೀರಥನ ಸಾಧನೆ ಅಸಾಮಾನ್ಯ, ಇದು ಪರಿಶ್ರಮ ಮತ್ತು ಕಠಿಣ ನಿರ್ಣಯಗಳ ಮೂಲಕ ಜಯ ಸಾಧಿಸಬಹುದೆಂಬ ಮುನ್ನುಡಿ ಬರೆದವರು ಭಗೀರಥ ಮಹಿರ್ಷಗಳು, ಸದಾ ಇವರ ಮಾರ್ಗದಲ್ಲಿ ನಡೆಯುವಂತಾಗಬೇಕು ಎಂದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ರಮೇಶ್ ಎಂ.ಸಿ, ತಾಲ್ಲೂಕು ಉಪ್ಪಾರ ಸಂಘದ ಅಧ್ಯಕ್ಷ ಗಿರೀಶ್ ಕೆ.ಬಿ, ಜಿಲ್ಲಾ ಉಪ್ಪಾರ ಯುವಕರ ಸಂಘದ ಅಧ್ಯಕ್ಷ ಲೋಕೇಶ್, ಪ್ರಧಾನ ಕಾರ್ಯದರ್ಶಿ ಮಾರುತಿ ಎಚ್.ಡಿ, ರಾಜ್ಯ ಭಗೀರಥ ನೌಕರರ ಸಂಘದ ಅಧ್ಯಕ್ಷೆ ಎನ್.ಎಸ್. ಚಂದ್ರಪ್ಪ, 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಳನಾಯ್ಕ್ ಹಾಗೂ ಎಲ್ಲಾ ತಾಲ್ಲೂಕು ಅಧ್ಯಕ್ಷರು, ಉಪಾಧ್ಯಕ್ಷರು ಉಪಸ್ಥಿತರಿದ್ದರು.

### ನಿವೃತ್ತ ವಿಜ್ಞಾನ ಶಿಕ್ಷಕ ಶಿವಕುಮಾರ್ ನಿವಾಸಕ್ಕೆ ಪೂರ್ಣಿಮಾ ಭೇಟಿ: ಕುಟುಂಬಕ್ಕೆ ಸಾಂತ್ವನ



» ಚಳ್ಳಕೆರೆ

ಇಲ್ಲಿನ ಗಾಂಧಿನಗರದಲ್ಲಿ ವಾಸವಿರುವ ತಳಕು ಹೋಬಳಿಯ ತಿಮ್ಮಣ್ಣನಹಳ್ಳಿ ಮೂಡಲಗಿರಿಯಪ್ಪ ಗ್ರಾಮೀಣ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಶಿವಕುಮಾರ್ ಇತ್ತೀಚೆಗೆ ಮೃತಪಟ್ಟಿದ್ದು, ಅವರ ಮನೆಗೆ ತೆರಳಿದ ಹಿರಿಯೂರು ಕ್ಷೇತ್ರದ ಮಾಜಿ ಶಾಸಕಿ ಪೂರ್ಣಿಮಾಶ್ರೀನಿವಾಸ್ ಕುಟುಂಬ ವರ್ಗಕ್ಕೆ ಸಾಂತ್ವನ ತಿಳಿಸಿದರಲ್ಲದೆ, ಆರ್ಥಿಕ ನೆರವು ನೀಡಿದರು.



# ಹೊಸ ಇತಿಹಾಸ....



ಸಾಮಾಜಿಕ ಜಾಲತಾಣಗಳ ಅಭಿವೃದ್ಧಿಯೊಂದಿಗೆ ಭಾರತದ ಬಹುತೇಕ ಜನರು ಇತಿಹಾಸಕಾರರಾಗಿ ಬದಲಾದ ಕಾಲಘಟ್ಟದಲ್ಲಿ ನಾವಿದ್ದೇವೆ.....

ನಾವೆಲ್ಲರೂ ಶೈಕ್ಷಣಿಕ ಅಪರಾಧಿಗಳು......

ಹಿಂದಿನ ಇತಿಹಾಸ ಮಹಾತ್ಮ ಗಾಂಧಿ ದೇಶ ಭಕ್ತ ಸತ್ಯ ಅಹಿಂಸೆಯ ಪ್ರತಿಪಾದಕ.

ಇಂದಿನ ವರ್ತಮಾನದಲ್ಲಿ ಎಂ. ಕೆ. ಗಾಂಧಿ ಒಬ್ಬ ನಯವಂಚಕ. ಗೋಡ್ಸೆ ಒಬ್ಬ ನಿಜವಾದ ದೇಶಪ್ರೇಮಿ......

ಹಿಂದಿನ ಇತಿಹಾಸದಲ್ಲಿ ಟಿಪ್ಪು ಸ್ವಾತಂತ್ರ್ಯ ಹೋರಾಟಗಾರ ಮೈಸೂರು ಹುಲಿ,

ಇಂದಿನ ವರ್ತಮಾನದಲ್ಲಿ ಟಿಪ್ಪು ಒಬ್ಬ ಮತಾಂಧ – ದೇಶದ್ರೋಹಿ...

ಹಿಂದಿನ ಇತಿಹಾಸದಲ್ಲಿ ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದವರು,

ಈಗಿನ ವರ್ತಮಾನದಲ್ಲಿ ಆರ್ಯರು ಇಲ್ಲಿನ ಮೂಲ ನಿವಾಸಿಗಳು....

ಹಿಂದಿನಇತಿಹಾಸದಲ್ಲಿಕನ್ನಂಬಾಡಿಅಣೆಕಟ್ಟು ಕಟ್ಟಿಸಿದ್ದು ಸರ್ ಎಂ ವಿಶ್ವೇಶ್ವರಯ್ಯ,

ಇಂದಿನ ವರ್ತಮಾನದಲ್ಲಿ ವಿಶ್ವೇಶ್ವರಯ್ಯ ಕೇವಲ ಇಂಜಿನಿಯರ್. ನಿಜವಾಗಿ ನಿರ್ಮಿಸಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ್.....

ಹಿಂದಿನ ಇತಿಹಾಸದಲ್ಲಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತದ ಸಂವಿಧಾನ ರಚಿಸಿ ಸಮಾನತೆ ಸ್ವಾತಂತ್ರ್ಯ ಜಾತ್ಯಾತೀತ ಮೌಲ್ಯಗಳನ್ನು ಎತ್ತಿಹಿಡಿದ ಮಾಹಾನ್ ಮಾನವತಾವಾದಿ,

ಇಂದಿನ ವರ್ತಮಾನದಲ್ಲಿ ಅಂಬೇಡ್ಕರ್ ರಚಿಸಿದ ಸಂವಿಧಾನದಲ್ಲಿ ಮೀಸಲಾತಿ ನೀಡಿ ಸಮಾಜದಲ್ಲಿ ಅಸಮಾನತೆ ಉಂಟುಮಾಡಿ ಪ್ರತಿಭಾ ಪಲಾಯನದಿಂದಾಗಿ ದೇಶದ ಅಭಿವೃದ್ಧಿ ಕುಂಠಿತವಾಗಿದೆ.....

ಹಿಂದಿನ ಇತಿಹಾಸದಲ್ಲಿ ಗ್ರಹಣ ಎಂಬುದು ಸಹಜ ಸ್ವಾಭಾವಿಕ. ಸೂರ್ಯ ಚಂದ್ರ ಭೂಮಿಯ ನಡುವಿನ ನೆರಳು ಬೆಳಕಿನಾಟ ಎಂದು ಖಗೋಳಶಾಸ್ತ್ರಜ್ಞರು ಹೇಳುತ್ತಿದ್ದರು.

ಇಂದಿನ ವರ್ತಮಾನದಲ್ಲಿ ಬ್ರಹ್ಮಾಂಡ ಆನಂದರವಿಶಂಕರ ಮುಂತಾದ ಮಹರ್ಷಿಗಳು ರಾಹು ಕೇತುವನ್ನು ನುಂಗುವುದೇ ಗ್ರಹಣ ಎಂದು ಹೇಳುತ್ತಾರೆ.......

ಹಿಂದಿನ ಇತಿಹಾಸದಲ್ಲಿ 1–2–3–4–5–6......ಮುಂತಾದವು ಗಣಿತ ಶಾಸ್ತ್ರದ ಅಂಕಿ ಸಂಖ್ಯೆಗಳು ಮಾತ್ರ.

ಇಂದಿನ ವರ್ತಮಾನದಲ್ಲಿ ಕೆಲವು ಸಂಖ್ಯೆಗಳು ಅದೃಷ್ಟ ಮತ್ತೆ ಕೆಲವು ಸಂಖ್ಯೆಗಳು ದರಿದ್ರ.....

ಹಿಂದಿನ ಇತಿಹಾಸದಲ್ಲಿ ಹಿಂದೂ ಮಹಾಸಾಗರ,

ಇಂದಿನ ವರ್ತಮಾನದಲ್ಲಿ ಇಂಡಿಯನ್ ಓಷನ್,

ಹಿಂದಿನ ಇತಿಹಾಸದಲ್ಲಿ ಚಾಮುಂಡೇಶ್ವರಿ ದೇವತೆ, ಮಹಿಷಾಸುರ ರಾಕ್ಷಸ,

ಇಂದಿನ ವರ್ತಮಾನದಲ್ಲಿ ಚಾಮುಂಡೇಶ್ವರಿ ಕಾಲ್ಪನಿಕ,

ಮಹಿಷ ಐತಿಹಾಸಿಕ ಮೂಲ ಪುರುಷ.....

ಹಿಂದಿನ ಇತಿಹಾಸದಲ್ಲಿ ಸಾಮ್ರಾಟ ಅಶೋಕ ಯುದ್ಧದ ಹಿಂಸೆಯಿಂದ ಮನನೊಂದು ಬೌದ್ಧ ಧರ್ಮ ಸ್ವೀಕರಿಸಿ ಶಾಂತಿ ಅಹಿಂಸೆಯನ್ನು ವಿದೇಶಗಳಿಗು ವಿಸ್ತರಿಸಿದ ಮಹಾಪುರುಷ,

ಇಂದಿನ ವರ್ತಮಾನದಲ್ಲಿ ಅಶೋಕನ ಶಾಂತಿ ಮಂತ್ರದಿಂದಲೇ ಭಾರತದ ಸೈನ್ಯ ದುರ್ಬಲವಾಗಿ ವಿದೇಶಿಯರ ಆಕ್ರಮಣಕ್ಕೆ ದಾರಿ ಮಾಡಿಕೊಟ್ಟಿತು.....

ಹಿಂದಿನ ಇತಿಹಾಸದಲ್ಲಿ ಕೆಲವು ಸ್ವಾತಂತ್ರ್ಯ ಹೋರಾಟಗಾರ ತ್ಯಾಗ ಬಲಿದಾನಗಳು ಮತ್ತು ಕುತಂತ್ರಿಗಳ ಹೆಸರುಗಳು ಇದೆ.

ಇಂದಿನ ವರ್ತಮಾನದಲ್ಲಿ ಕುತಂತ್ರಿಗಳು ಸ್ವಾತಂತ್ರ್ಯ ಹೋರಾಟಗಾರರಾಗಿ ಸ್ವಾತಂತ್ರ್ಯ ಹೋರಾಟಗಾರರು ಕುತಂತ್ರಿಗಳಾಗಿದ್ದಾರೆ......

ಹೀಗೆ ಇತಿಹಾಸವನ್ನು ಹೊಸದಾಗಿ ಬರೆಯುತ್ತಾ ಹೋದರೆ ಇತಿಹಾಸ ಎಂಬುದೇ ಇರುವುದಿಲ್ಲ. ಕೇವಲ ವರ್ತಮಾನ ಮಾತ್ರ ಇರುತ್ತದೆ. ಮುಂದೆ ಮತ್ತೊಂದು ಇತಿಹಾಸ ರಚಿತವಾಗಬಹುದು.....

ಎತ್ತ ಸಾಗುತ್ತಿದ್ದೇವೆ ನಾವು. ಬಹುಶಃ ನಮ್ಮದೇ ಮಕ್ಕಳನ್ನು ವಂಚಿಸುತ್ತಿರುವ ಆತ್ಮ ದ್ರೋಹಿಗಳು ನಾವು.

ಇತಿಹಾಸ ಹೇಗೆ ದಾಖಲಾಗುತ್ತದೆ, ಅದು ದಾಖಲು ಮಾಡುವವರು ಯಾರು, ಅದಕ್ಕೆ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ ಎಂಬುದರ ಪ್ರಾಥಮಿಕ ಅರಿವು ಇಲ್ಲದ ಅನೇಕರು ಯಾವುದೋ ಒಂದು ಯಾರದೋ ಒಂದು ಅಭಿಪ್ರಾಯಗಳ ಆಧಾರದ ಮೇಲೆ ಇತಿಹಾಸವನ್ನು ಅರ್ಥಮಾಡಿಕೊಂಡು ತಮ್ಮ ಅಭಿಪ್ರಾಯ ರೂಪಿಸಿಕೊಳ್ಳುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ.

ಭಾರತದಲ್ಲಿ ಸಹ ಅತ್ಯಂತ ಪ್ರಕಾಂಡ ಇತಿಹಾಸಜ್ಞರು, ಸಂಶೋಧಕರು, ಭಾಷಾ ತಜ್ಞರು, ಮಾನವ ಶಾಸ್ತ್ರಜ್ಞರು, ಪ್ರಾಚ್ಯ ವಸ್ತು ತಜ್ಞರು, ಉತ್ಖನನ ತಜ್ಞರು, ಸಂಖ್ಯಾ ಶಾಸ್ತ್ರಜ್ಞರು, ಜಾನಪದ ವಿದ್ವಾಂಸರು ಮುಂತಾದ ಅನೇಕ ಮಹಾನ್ ವ್ಯಕ್ತಿಗಳು ಇದ್ದರು ಮತ್ತು ಇದ್ದಾರೆ. ಅವರೆಲ್ಲರೂ ಶ್ರಮ ಪಟ್ಟು ಭಾರತದ ಇತಿಹಾಸವನ್ನು ಆದಷ್ಟು ಸ್ಪಷ್ಟವಾಗಿ ದಾಖಲಿಸಿದ್ದಾರೆ.

ಈಗ ರಾಜಕೀಯ ಕಾರಣಗಳಿಗಾಗಿ, ಸೈದ್ಧಾಂತಿಕ ಗುಲಾಮಿತನದ ಕಾರಣದಿಂದಾಗಿ ಇತಿಹಾಸವನ್ನೇ ತಿರುಚುವ ಕೆಲಸ ಆಗುತ್ತಿದೆ. ದಯವಿಟ್ಟು ಇದನ್ನು ನಿಲ್ಲಿಸಿ.

ಜೊತೆಗೆ ಇತಿಹಾಸವನ್ನು ಯಾರೋ ದಾರಿಹೋಕರು, ಸಾಮಾಜಿಕ ಜಾಲತಾಣಗಳ ಪಂಡಿತರು ಹೇಳುವುದಲ್ಲ. ಭಾರತ ಸರ್ಕಾರ ಮತ್ತುರಾಜ್ಯಸರ್ಕಾರಗಳಅಧಿಕೃತಗೆಜೆಟಿಯರ್ ನಲ್ಲಿ ಅದನ್ನು ದಾಖಲಿಸಲಾಗಿರುತ್ತದೆ. ಅದು ಸಂಪೂರ್ಣ ಸತ್ಯವಲ್ಲದಿರಬಹುದು. ಆದರೆ ಸದ್ಯಕ್ಕೆ ಅದೇ ಅಂತಿಮ. ಮತ್ತಷ್ಟು ಹೊಸ ದಾಖಲೆಗಳು ದೊರೆತಾಗ ಸರ್ಕಾರಗಳೇ ಅದನ್ನು ಅಧಿಕೃತವಾಗಿ ಬದಲಾವಣೆ ಮಾಡುತ್ತದೆ.ಅದನ್ನು ನಿರ್ಧಾರ ಮಾಡಲು ಇತಿಹಾಸ ತಜ್ಞರು ಇದ್ದಾರೆ.

ಯಾವುದೋ ದ್ವೇಷ ಅಸೂಯೆಯಿಂದ ಇತಿಹಾಸದ ಸುಳ್ಳು ಪ್ರಚಾರ ಒಳ್ಳೆಯದಲ್ಲ. ಭಾರತದ ಇತಿಹಾಸ ದಾಖಲಿಸುವಾಗ ಇಲ್ಲಿ ಪ್ರಜಾಪ್ರಭುತ್ವ ಇರಲಿಲ್ಲ. ರಾಜಕೀಯ ಪಕ್ಷಗಳು ಇರಲಿಲ್ಲ. ಆಗ ಸುಳ್ಳು ಹೇಳುವ ಅವಶ್ಯಕತೆ ಆಗಿನ ಇತಿಹಾಸಕಾರರಿಗೆ ಇರಲಿಲ್ಲ.

ಪಠ್ಯ ಪುಸ್ತಕಗಳ ಪರಿಷ್ಕರಣೆ ಹಾದಿ ಬೀದಿಯ – ಮಾಧ್ಯಮಗಳ – ಸಾಮಾಜಿಕ ಜಾಲತಾಣಗಳ ಚರ್ಚಾ ವಿಷಯವಲ್ಲ. ಅದು ಭಾರತದ ಸಾಂಸ್ಕೃತಿಕ ಶೈಕ್ಷಣಿಕ ಸಾಮಾಜಿಕ ಆರ್ಥಿಕ ವಿದ್ವಾಂಸರ ಕರ್ತವ್ಯ ಮತ್ತು ಜವಾಬ್ದಾರಿ. ಅದು ಅತ್ಯಂತ ಸೂಕ್ಷ್ಮ ಮತ್ತು ದೂರದೃಷ್ಟಿಯ ಮಹತ್ತರ ಕೆಲಸ. ಬಲಿಷ್ಠ ಭಾರತದ ನಿರ್ಮಾಣದ ಅಡಿಗಲ್ಲು. ಅದನ್ನು ಇಷ್ಟೊಂದು ಕೆಳಮಟ್ಟಕ್ಕೆ ಇಳಿಸುತ್ತಿರುವ ನಾವುಗಳು ನಿಜಕ್ಕೂ ಒಂದು ರೀತಿಯ ಶೈಕ್ಷಣಿಕ ಅಪರಾಧಿಗಳು.....

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,

ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,





▪ ಲೇಖನ
ವಿವೇಕಾನಂದ. ಹೆಚ್.ಕೆ.
9844013068

## ಶಿಕ್ಷಣ ಇಲಾಖೆ ಸಮಸ್ಯೆಗಳ ನಡುವೆಯೂ ಕಾರ್ಯನಿರ್ವಹಿಸಿದ ಕೀರ್ತಿ ಧನಂಜಯರವರದ್ದು

**ಚಳ್ಳಕೆರೆ:** ಶಿಕ್ಷಣ ಇಲಾಖೆಯಲ್ಲಿ ಸುಮಾರು 39 ವರ್ಷಗಳ ಕಾಲ ವಿವಿಧ ಹಂತದಲ್ಲಿ ಸೇವೆ ನಿರ್ವಹಿಸಿ ಚಿತ್ರದುರ್ಗ ಜಿಲ್ಲಾ ಉಪನಿರ್ದೇಶಕ ಕಚೇರಿಯಲ್ಲಿ ಪತ್ರಾಂಕಿತ ಸಹಾಯಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದ ಟಿ.ಎನ್. ಧನಂಜಯ ಶಿಕ್ಷಣ ಇಲಾಖೆ ಸಲ್ಲಿಸಿದ ಸೇವೆ ಅಪಾರವಾದದ್ದು. ಶಿಕ್ಷಕರ ಸಮಸ್ಯೆಗಳ ಬಗ್ಗೆ ತ್ವರಿತಗತಿಯಲ್ಲಿ ಸ್ಪಂದಿಸುವ ಅವರ ಪ್ರಾಮಾಣಿಕ ಕರ್ತವ್ಯದ ಬಗ್ಗೆ ಎಲ್ಲಾ ಶಿಕ್ಷಕರಿಗೂ ಹೆಮ್ಮೆ ಇದೆ ಎಂದು ಶಿಕ್ಷಕ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಕಸಬಾ ಕಾರ್ಯದರ್ಶಿ ಕೆಂಚವೀರನಹಳ್ಳಿ ಎನ್. ಮಲ್ಲೇಶ್ ತಿಳಿಸಿದರು. ಅವರು, ಇತ್ತೀಚೆಗೆ ನಿವೃತ್ತಿ ಹೊಂದಿದ ಪತ್ರಾಂಕಿತ ಸಹಾಯಕ ಟಿ.ಎನ್.ಧನಂಜಯರವರನ್ನು ಶಿಕ್ಷಕರ ಪರವಾಗಿ ಅವರ ನಿವಾಸದಲ್ಲಿ ಗೌರವಿಸಿ, ಅಭಿನಂದಿಸಿ ಮಾತನಾಡಿದರು. ಚಳ್ಳಕೆರೆ



ತಾಲ್ಲೂಕಿನಲ್ಲಿ ಅತಿಹೆಚ್ಚು ಸೇವೆ ಸಲ್ಲಿಸಿದ ಅವರು, ದಾವಣಗೆರೆ, ಶಿವಮೊಗ್ಗ, ಬೆಂಗಳೂರು ಮುಂತಾದ ಕಡೆ ಕಾರ್ಯನಿರ್ವಹಿಸಿದ್ದಾರೆ. ಅವರ ಸೇವಾಧಿಯಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೆ ಅವರು ನಿವೃತ್ತಿ ಪಡೆಯುತ್ತಿರುವುದು ಸಂತಸ ವಿಷಯ. ಶಿಕ್ಷಣ ಇಲಾಖೆಯಲ್ಲಿ ಪ್ರತಿಹಂತದಲ್ಲೂ ಅನೇಖ ಸಮಸ್ಯೆ ಉಂಟಾಗುತ್ತದೆ. ಆದರೆ, ಎಲ್ಲವನ್ನೂ ಬದಿಗೊತ್ತಿ ಕಾನೂನು ಪರಿಮಿತಿಯಲ್ಲೇ ಶಿಕ್ಷಕರಿಗೆ ನ್ಯಾಯವನ್ನು ದೊರಕಿಸಿಕೊಟ್ಟಿದ್ದಾರೆ. ಅವರ ಸೇವಾವೈಖರಿ ಬೇರೆಯವರಿಗೂ ಮಾದರಿಯಾಗಿದೆ ಎಂದರು. ನಿವೃತ್ತಿ ಹೊಂದಿದ ಟಿ.ಎನ್.ಧನಂಜಯ ಮಾತನಾಡಿ, ಸರ್ಕಾರ ಸೇವೆಯಲ್ಲಿ ನಿವೃತ್ತಿ ಸಹಜ. ಸೇವಾವಧಿ ಮುಗಿದ ನಂತರ ನಿವೃತ್ತರಾಗಬೇಕು. ಆದರೆ, ನಾವು ಮಾಡುವ ಕೆಲಸ ನಮಗೆ ತೃಪ್ತಿ ಕೊಡಬೇಕಾದರೆ ಪ್ರಾಮಾಣಿಕತೆಯಿಂದ ಸಮಸ್ಯೆಗಳ ನಿವಾರಣೆಗೆ ಒತ್ತು ನೀಡಬೇಕಿದೆ. ನಾನು ಆ ಕೆಲಸವನ್ನು ಮಾಡುವ ಮೂಲಕ ಶಿಕ್ಷಕರಿಗೆ ಸ್ಪಂದಿಸಿದ್ದೇನೆ. ನಿವೃತ್ತಿ ಪಡೆದ ನಂತರವೂ ನನಗೆ ಶಿಕ್ಷಕರ ಸಮೂಹ ಗೌರವ ನೀಡುತ್ತಿರುವುದು ಹೆಚ್ಚು ಸಂತೋಷವಾಗಿದೆ. ಶಿಕ್ಷಣ ಇಲಾಖೆಯ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯಲು ಯಾರಾದರೂ ಮುಂದೆ ಬಂದರೂ ಅವರಿಗೆ ಎಲ್ಲಾ ಸಲಹೆ, ಸಹಕಾರ ನೀಡುವ ಭರವಸೆ ನೀಡಿದರು.

## ಮಕ್ಕಳಿಗೆ ಜಂತು ನಿವಾರಕ ಮಾತ್ರೆ ನುಂಗಿಸಿ: ಟಿಹೆಚ್ಇಒ

» **ಚಿತ್ರದುರ್ಗ**

ಆರು ತಿಂಗಳಲ್ಲಿ ಒಂದು ಬಾರಿ ಜಂತು ನಿವಾರಕ ಮಾತ್ರೆ ನಿಮ್ಮ ಮಕ್ಕಳಿಗೆ ನುಂಗಿಸಿ, ಬೆಳವಣಿಗೆ ಕುಂಠಿತವಾಗದಂತೆ ನೋಡಿಕೊಳ್ಳಿ ಎಂದು ಚಿತ್ರದುರ್ಗ ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜುನಾಥ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಚಿಕ್ಕಗೊಂಡಹಳ್ಳಿ ಗ್ರಾಮದಲ್ಲಿ ಬುಧವಾರ ಎರಡನೇ ಹಂತದ ಸಮುದಾಯ ಆಧಾರಿತ ರಾಷ್ಟ್ರೀಯ ಜಂತು ಹುಳ ನಿವಾರಣಾ ಕಾರ್ಯಕ್ರಮದಲ್ಲಿ ಮನೆ ಮನೆ ಭೇಟಿ, 1ನೇ ಹಂತದಲ್ಲಿ ಜಂತು ನಿವಾರಕ ಮಾತ್ರೆ ನುಂಗದೇ ಉಳಿದ ಮಕ್ಕಳಿಗೆ ಮೇ 13 ರಿಂದ 27 ರವರೆಗೆ ನಡೆಯುತ್ತಿರುವ ಸಮುದಾಯ ಆಧಾರಿತ ರಾಷ್ಟ್ರೀಯ ಜಂತು ಹುಳ ನಿವಾರಣಾ ಕಾರ್ಯಕ್ರಮದ ಅನುಷ್ಠಾನ ಪರಿಶೀಲಿಸಿ ಮಾಹಿತಿ ಶಿಕ್ಷಣ ನೀಡಿದರು.



ನಿಮ್ಮ ಮಕ್ಕಳಿಗೆ ಆರು ತಿಂಗಳಿಗೊಮ್ಮೆ ಜಂತುಹುಳ ನಿವಾರಣಾ ಮಾತ್ರೆ ನುಂಗಿಸಬೇಕು. ಜಂತುಹುಳು ಬಾದೆಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ. ಕಲಿಕೆಯಲ್ಲಿ ಹಿಂದುಳಿಯುವಿಕೆ ಹಾಗೂ ರಕ್ತಹೀನತೆ ಉಂಟಾಗಿ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತದೆ. ಮಣ್ಣಿನಲ್ಲಿ ಆಟವಾಡುವ ಮಕ್ಕಳಿಗೆ ಸರಿಯಾದ ಕ್ರಮದಲ್ಲಿ ಕೈತೊಳೆಯುವ ಅಭ್ಯಾಸ ಇಲ್ಲದಿದ್ದರೆ ಜಂತುಬಾದೆ ಪ್ರಾರಂಭವಾಗುತ್ತದೆ. ಮಕ್ಕಳಿಗೆ ಮಣ್ಣಿನಲ್ಲಿ ಆಟವಾಡಿ ಬಂದ ನಂತರ, ಶೌಚಾಲಯ ಬಳಸಿದ ನಂತರ, ಊಟಕ್ಕೆ ಮೊದಲು ಮತ್ತು ಊಟದ ನಂತರ ಸಾಬೂನಿನಿಂದ ಕೈ ತೊಳೆಯುವ ಅಭ್ಯಾಸ ರೂಢಿ ಮಾಡಿ ಮಕ್ಕಳನ್ನು ಕಾಯಿಲೆಗಳಿಂದ ರಕ್ಷಿಸಿ ಎಂದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಅವರು ವೈಯಕ್ತಿಕ ಸ್ವಚ್ಛತೆ, ಕೈ ತೊಳೆಯುವ ವಿಧಾನದ ಬಗ್ಗೆ ತಿಳಿಸಿದರು. ಮನೆ ಮನೆ ಭೇಟಿಯಲ್ಲಿ ಮೊದಲ ಹಂತದಲ್ಲಿ ಜಂತು ಮಾತ್ರೆ ನುಂಗದೇ ಇರುವ 28 ಮಕ್ಕಳಿಗೆ ಜಂತು ಮಾತ್ರೆ ನುಂಗಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ಸುರಕ್ಷತಾಧಿಕಾರಿ ಸುಧಾ, ಆಶಾ ಕಾರ್ಯಕರ್ತೆ ಶಾರದ ಇದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T